ಸಂಪಾದಕ : ಶಿವಕುಮಾರ್ ಕೆ. ವರ್ಲಕೊಂಡ

PRGI : KNKAN/26/A2919
E-mail: skandagirivani@gmail.com

# ಸ್ಕಂದಗಿರಿ ವಾಣಿ

ಕನ್ನಡ ದಿನಪತ್ರಿಕೆ

₹2/-

Editor : SHIVAKUMAR. K.
M.: 81475 82389 / 9743641515

ಸತ್ಯದ ಧ್ವನಿ

SKANDAGIRI VANI Kannada Daily SUNDAY | October 11, 2026 | Volume 01 | Issue 86 | Pages 4 |

## ಗಂಟಲಮಲ್ಲಮ್ಮ ಡ್ಯಾಂಗೆ ಸ್ವಯಂಪ್ರೇರಣೆಯಿಂದ ಭೂಮಿ ಮಾರಾಟ ಎಸ್‌ಆರ್ ದರಕ್ಕಿಂತ 3–4 ಪಟ್ಟು ಪರಿಹಾರ ಪಡೆದ ರೈತರು!



**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಭಾಗ್ಯನಗರ:** ಸಾವಿರಾರು ಜನರ ಉಪಯೋಗಕ್ಕೆ ಶಾಶ್ವತವಾಗಿ ಅನುಕೂಲವಾಗುವಂತೆ ನಿರ್ಮಿಸಲಾಗುತ್ತಿರುವ ಗಂಟಲಮಲ್ಲಮ್ಮ ಡ್ಯಾಂ ನಿರ್ಮಾಣಕ್ಕೆ ನಮ್ಮ ಜಮೀನನ್ನು ಸ್ವಯಂ ಪ್ರೇರಿತವಾಗಿಯೇ ಮಾರಾಟ ಮಾಡಿದ್ದೇವೆ ಮತ್ತು ಸರ್ಕಾರ ನಿಗಧಿಪಡಿಸಿರುವ ಎಸ್.ಆರ್ ಧರಕ್ಕಿಂದ 3–4 ಪಟ್ಟು ಹೆಚ್ಚಿಗೆ ಪರಿಹಾರವನ್ನು ಪಡೆದುಕೊಂಡಿದ್ದೇವೆ. ಬಲವಂತವಾಗಿ ನಮ್ಮಿಂದ ಯಾರೂ ಭೂಮಿಯನ್ನು ಕಬಳಿಸಿಲ್ಲ ಎಂದು ಸ್ಪಷ್ಟಪಡಿಸಿದ ಗಂಟಲಮಲ್ಲಮ್ಮ ಕಣಿವೆ ಡ್ಯಾಂ ನಿರ್ಮಾಣಕ್ಕೆ ಜಮೀನು ನೀಡಿರುವ ರೈತರು, ಡ್ಯಾಂ ವಿಚಾರದಲ್ಲಿ ಶಾಸಕರ ವಿರುದ್ಧ ಮಾಡಲಾಗುತ್ತಿರುವ ಆರೋಪಗಳನ್ನು ತಳ್ಳಿಹಾಕಿದರು.

ಪಾತಪಾಳ್ಯ ಸಮೀಪದಲ್ಲಿನ ಗಂಟಲಮಲ್ಲಮ್ಮ ಡ್ಯಾಂ ನಿರ್ಮಾಣ ಸ್ಥಳದಲ್ಲಿ ಜಮೀನು ನೀಡಿರುವ ರೈತರು ಹಾಗೂ ರೈತ ಮುಖಂಡರು ಪತ್ರಿಕಾಗೋಷ್ಠಿ ನಡೆಸಿ ಯೋಜನೆಗೆ ಸಂಬಂಧಿಸಿದಂತೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ರೈತ ಪಾತಪಾಳ್ಯ ರವಿ ಮಾತನಾಡಿ, ಒಳ್ಳೆಯ ಉದ್ದೇಶದಿಂದ ನಿರ್ಮಿಸುತ್ತಿರುವ ಅಣೆಕಟ್ಟು ನಿರ್ಮಾಣಕ್ಕಾಗಿ ನಮ್ಮ ಕುಟುಂಬದಿಂದಲೇ ಸುಮಾರು 18 ಎಕರೆಯಷ್ಟು ಜಮೀನನ್ನು ನೀಡಿದ್ದೇವೆ. ಪರಿಹಾರವಾಗಿ ಸರ್ಕಾರ ನಿಗದಿಪಡಿಸಿರುವ ಧರಕ್ಕಿಂದ 3–4 ಪಟ್ಟು ಪರಿಹಾರವನ್ನು ನೇರವಾಗಿ ನಮ್ಮ ಖಾತೆಗಳಿಗೆ ಪಡೆದುಕೊಂಡಿದ್ದೇವೆ. ನಾವು ಸ್ವಯಂಪ್ರೇರಿತವಾಗಿಯೇ ನಮ್ಮ ಭೂಮಿಯನ್ನು ಮಾರಾಟ ಮಾಡಿದ್ದೇವೆ. ಇದು ಮಾರುವ ಮತ್ತು ಕೊಳ್ಳುವವರ ನಡುವಿನ ವ್ಯವಹಾರ ಬೇರೆಯವರು ಇದರಲ್ಲಿ ಹಸ್ತಕ್ಷೇಪ ನಡೆಸಿ ಪ್ರಚಾರ ಪಡೆದುಕೊಳ್ಳುವುದು ಸರಿಯಲ್ಲ. ಈ ವಿಚಾರದಲ್ಲಿ ಶಾಸಕರ ಹೆಸರು ತರುತ್ತಿರುವುದು ಸರಿಯಲ್ಲ. ಡ್ಯಾಂ ನಿರ್ಮಾಣದಿಂದ ಪಾತಪಾಳ್ಯ, ಚೇಳೂರು ಮತ್ತು ಗೂಳೂರು ಹೋಬಳಿಯ ಸಾವಿರಾರು ರೈತರ ಕೃಷಿಗೆ ಮತ್ತು ಕುಡಿಯುವ ನೀರಿಗೆ ಶಾಶ್ವತವಾಗಿ ಪರಿಹಾರ ದೊರೆಯುತ್ತದೆ. ರೈತ ಗಂಗಾಧರ ಮಾತನಾಡಿ, ತಾವು ಒಂದೂವರೆ ಎಕರೆ ಜಮೀನು ನೀಡಿರುವುದಾಗಿ ತಿಳಿಸಿದರು. ರವಿ ಪಾತಪಾಳ್ಯ ಮಾತನಾಡಿ, ತಮ್ಮ ಕುಟುಂಬಕ್ಕೆ ಸೇರಿದ 18 ಎಕರೆ ಜಮೀನಿನ ಪೈಕಿ ಎಂಟು ಎಕರೆ ಜಮೀನು ನೀಡಿರುವುದಾಗಿ ಹೇಳಿದರು. ಸರ್ಕಾರದ ಎಸ್‌ಆರ್ ದರಕ್ಕಿಂತ ಮೂರು ಪಟ್ಟು ಹೆಚ್ಚಿನ ಹಣ ನೀಡಲಾಗಿದೆ ಎಂದು ಅವರು ಪ್ರತಿಪಾದಿಸಿದರು.

ರೈತ ಫಾರೂಕ್ ಅಬ್ದುಲ್ಲಾ ಮಾತನಾಡಿ, ತಾವು ಮುಕ್ಕಾಲು ಎಕರೆ ಜಮೀನು ನೀಡಿದ್ದು, ಯಾರೂ ಬಲವಂತವಾಗಿ ಜಮೀನು ಪಡೆದಿಲ್ಲ, ಜನರಿಗೆ ಒಳ್ಳೆಯದು ಆಗುತ್ತದೆ ಎಂಬ ಉದ್ದೇಶದಿಂದಲೇ ಜಮೀನನ್ನು ನೀಡಲಾಗಿದೆ ಎಂದು ಸ್ಪಷ್ಟಪಡಿಸಿದರು. ನರಸಮ್ಮ ಅವರು ಕೂಡ ಜಮೀನು ನೀಡಿರುವ ವಿಚಾರದಲ್ಲಿ ಶಾಸಕರಿಂದ ಯಾವುದೇ ಅನ್ಯಾಯವಾಗಿಲ್ಲ ಎಂದು ಅಭಿಪ್ರಾಯಪಟ್ಟರು.

ರೈತ ಮುಖಂಡ ಎಸ್.ಎನ್. ರಾಮರೆಡ್ಡಿ ಮಾತನಾಡಿ, ಸುಮಾರು 180 ಕೋಟಿ ರೂಪಾಯಿ ವೆಚ್ಚದಲ್ಲಿ ಗಂಟಲಮಲ್ಲಮ್ಮ ಕಣಿವೆ ಡ್ಯಾಂ ನಿರ್ಮಾಣವಾಗುತ್ತಿದ್ದು, ಇದರಿಂದ ಬಾಗೇಪಲ್ಲಿ ಮತ್ತು ಚೇಳೂರು ತಾಲ್ಲೂಕುಗಳ 177 ಹಳ್ಳಿಗಳಿಗೆ ಕುಡಿಯುವ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ನೀಗಿಸುವುದಲ್ಲದೆ ಅಂತರ್ಜಲ ಮಟ್ಟ ಹೆಚ್ಚಳವಾಗುವುದರಿಂದ ಕೊಳವೆಬಾವಿಗಳಲ್ಲಿ ನೀರಿನ ಲಭ್ಯತೆ ಸುಧಾರಿಸಿ ರೈತರಿಗೆ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಸಹಕಾರಿಯಾಗುವುದರ ಜತೆಗೆ, ಜಾನುವಾರುಗಳಿಗೆ ಮತ್ತು ಕುಡಿಯುವ ನೀರಿಗೂ ಅನುಕೂಲವಾಗಲಿದೆ ಎಂದು ಹೇಳಿದರು.

ಡ್ಯಾಂ ನಿರ್ಮಾಣ ವಿಚಾರದಲ್ಲಿ ಪರಿಹಾರ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಹಣ ಜಮೆಯಾಗುತ್ತಿದೆ. ಈ ಯೋಜನೆಯಿಂದ ಈ ಭಾಗದ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ನೆರವಾಗಲಿದೆ, ಆದರೆ ಡ್ಯಾಂ ನಿರ್ಮಾಣದಿಂದ ಶಾಸಕರ ವರ್ಚಸ್ಸು ಹೆಚ್ಚಾಗುವುದನ್ನು ಸಹಿಸದ ರಾಜಕೀಯ ವಿರೋಧಿಗಳು ಸುಳ್ಳು ಅಪಪ್ರಚಾರಗಳನ್ನು ನಡೆಸುತ್ತಿರುವುದು ಮತ್ತು ಡ್ಯಾಂ ನಿರ್ಮಾಣಕ್ಕೆ ಅಡ್ಡಿಪಡಿಸಲು ಯತ್ನಿಸುತ್ತಿರುವುದನ್ನು ಜನತೆ ಕ್ಷಮಿಸುವುದಿಲ್ಲ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ರೈತರಾದ ತಿಮ್ಮರಾಜು, ರವಿ, ಫಾರೂಕ್ ಅಬ್ದುಲ್ಲಾ, ಪ್ರಸಾದ್, ನರಸಮ್ಮ, ಗಂಗಾಧರ, ಚಿಕ್ಕ ನರಸಿಂಹಪ್ಪ, ನಾರಾಯಣಸ್ವಾಮಿ, ಮಂಜುನಾಥ, ಗಂಗರಾಜು, ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಕ್ರಷರ್‌ಗೆ ಮುತ್ತಿಗೆ ಹಾಕಿ ಗ್ರಾಮಸ್ಥರ ಪ್ರತಿಭಟನೆ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಕ್ಕಬಳ್ಳಾಪುರ:** ರಾಜಧಾನಿ ಬೆಂಗಳೂರಿನಿಂದ ಕೂಗಳತೆ ದೂರದ ಚಿಕ್ಕಬಳ್ಳಾಪುರದಲ್ಲಿ ಕಲ್ಲು ಕ್ವಾರಿಗಳು ಹಾಗೂ ಟಿಪ್ಪರ್‌ಗಳ ಹಾವಳಿ ಹೆಚ್ಚುತ್ತಲೇ ಇದ್ದು, ಇದರಿಂದ ನಾನಾ ರೀತಿಯ ಸಮಸ್ಯೆಗಳಿಗೆ ತುತ್ತಾಗುತ್ತಿದ್ದಾರೆ. ಇದರಿಮದ ಕ್ವಾರಿ ಸುತ್ತಲಿನ ಗ್ರಾಮಸ್ಥರು ಹಲವು ಪ್ರತಿಭಟನೆ ನಡೆಸುತ್ತಿದ್ದು, ಇದರ ನಡುವೆ ಶನಿವಾರದಂದು ಕಣಿವೆನಾರಾಯಣಪುರ ಸೇರಿ ಸುತ್ತಲಿನ ಗ್ರಾಮಸ್ಥರು ಕ್ರಷರ್‌ವೊಂದಕ್ಕೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ಚಿಕ್ಕಬಳ್ಳಾಪುರ ತಾಲೂಕೊಂದರಲ್ಲಿಯೇ 20ಕ್ಕೂ ಹೆಚ್ಚು ಕ್ರಷರ್‌ಗಳು, 200ಕ್ಕೂ ಹೆಚ್ಚು ಕಲ್ಲು ಕ್ವಾರಿಗಳಿವೆ. ಕಲ್ಲು ಕ್ವಾರಿಗಳಲ್ಲಿ ಅಲಂಕಾರಿ ಶಿಲೆ, ಕಟ್ಟಡ ಉಪಯೋಗಿ ಎಂಸ್ಯಾಂಡ್, ಜಲ್ಲಿಕಲ್ಲು ತಯಾರಿಸಲಾಗುತ್ತಿದೆ. ಅಲ್ಲದೆ ಭಾರಿ ಪ್ರಮಾಣದಲ್ಲಿ ಸಿಡಿಮದ್ದುಗಳನ್ನು ಬಳಸುತ್ತಿರುವುದ ಈ ಭಾಗದಲ್ಲಿ ವಾಯುಮಾಲಿನ್ಯ, ಶಬ್ದ ಮಾಲಿನ್ಯ ಹೆಚ್ಚಾಗಿ ಇದರಿಂದ ನಾನಾ ರೀತಿಯ ಸಮಸ್ಯೆಗಳನ್ನು ಅನುಭವಿಸುವಂತಾಗಿದೆ ಎಂಬುದು ಗ್ರಾಮಸ್ಥರು ಆರೋಪವಾಗಿದೆ.

ಕ್ರಷರ್ ಹಾಗೂ ಕಲ್ಲುಕ್ವಾರಿಗಳು 24 ಗಂಟೆಗಳು ಕಾರ್ಯನಿರ್ವಹಿಸುತ್ತಿರುವುದರಿಂದ ಈ ಭಾಗದಲ್ಲಿ ಮನೆಗಳು ಬಿರುಕು ಬಿಡುತ್ತಿವೆ. ಅಲ್ಲದೆ ಧೂಳಿನ ಸಮಸ್ಯೆ, ಶಬ್ಧ ಮಾಲಿನ್ಯವೂ ಹೆಚ್ಚಾಗಿದೆ. ಅಲ್ಲದೆ ವಿಟಿಯು, ಮುದ್ದೇನಹಳ್ಳಿಯ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಹಲವಾರು ಸಮಸ್ಯೆಗಳನ್ನು ಅನುಭವಿಸುವಂತಾಗಿದೆ. ಕ್ರಷರ್‌ಗಳ ಟಿಪ್ಪರ್‌ಗಳು ರಾತ್ರಿ ಹಗಲು ಓಡಾಡುತ್ತಿರುವುದರಿಂದ ಹಲವಾರು ಅಪಘಾತಗಳು ಸಂಭವಿಸಿ ಪ್ರಾಣಕಳೆದುಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಇದರ ನಡುವೆ ಕ್ರಷರ್ ಉತ್ಪನ್ನಗಳನ್ನು ಸ್ಥಳೀಯರಿಗೆ ಕಡಿಮೆ ಬೆಲೆಗೆ ನೀಡಬೇಕೆಂದು ಕ್ರಷರ್‌ಗಳ ಉತ್ಪನ್ನಗಳನ್ನು ಸಾಗಿಸುವ ವಾಹನಗಳ ಮಾಲೀಕರು ಗ್ರಾಮಸ್ಥರನ್ನು ಪುಸಲಾಯಿಸಿ ಪ್ರತಿಭಟನೆ ನಡೆಸಲಾಗಿದೆ ಎಂಬ ಆರೋಪ ಕೇಳಿ ಬಂದಿದೆ. ಪ್ರತಿಭಟನೆಯ ವೇಳೆ ಅಲ್ಲಿನ ಸಿಬ್ಬಂದಿ ಸ್ಥಳೀಯರ ನಡುವೆ ವಾಗ್ವಾದ ನಡೆದು ಕೈಕೈ ಮಿಲಾಯಿಸುವ ಹಂತಕ್ಕೆ ಪರಿಸ್ಥಿತಿ ತಲುಪಿತ್ತು ಎನ್ನಲಾಗಿದೆ. ಸುದ್ದಿ ತಿಳಿಯುತ್ತಿದ್ದಂತೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿ ಹತೋಟಿಗೆ ತರಲು ಯತ್ನಿಸಿದರು.

ಒಟ್ಟಿನಲ್ಲಿ ಜಿಲ್ಲೆಯಲ್ಲಿ ಕಾನೂನು ಬಾಹಿರವಾಗಿ ಕ್ರಷರ್ ಕಾರ್ಯನಿರ್ವಹಿಸುತ್ತಿವೆ ಎಂಬ ಗಂಭೀರ ಆರೋಪಗಳು ಕೇಳಿಬಂದರೂ, ಸಂಬಂಧಿಸಿದ ಅಧಿಕಾರಿಗಳು ಅವುಗಳ ವಿರುದ್ಧ ಕ್ರಮಕೈಗೊಳ್ಳದೆ ಜಾನ ಕುರುಡರಂತೆ ವರ್ತಿಸುತ್ತಿದ್ದಾರೆ ಎಂಬ ಆಕ್ರೋಷವೂ ವ್ಯಕ್ತವಾಗುತ್ತಿದೆ. ಇನ್ನಾದರೂ ಜಿಲ್ಲಾಡಳಿತ ಎಚ್ಚೆತ್ತುಕೊಂಡು ಕ್ರಷರ್ ಹಾಗೂ ಟಿಪ್ಪರ್‌ಗಳ ಹಾವಳಿಗೆ ತಪ್ಪಿಸಬೇಕೆಂದು ನಾಗರಿಕರ ಒತ್ತಾಯವಾಗಿದೆ.

## ಅ.12ರಂದು ಕೋಲಾರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಘಟಕ ಉದ್ಘಾಟನೆ

ಕೋಲಾರ : ಕೋಲಾರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಉದ್ಘಾಟನಾ ಸಮಾರಂಭ ನಗರದ ಅಂತರಗಂಗೆ ರಸ್ತೆಯಲ್ಲಿರುವ ಪತ್ರಕರ್ತರ ಭವನದಲ್ಲಿ ಅಕ್ಟೋಬರ್ 12 ಸೋಮವಾರ ಬೆಳಿಗ್ಗೆ 11–00 ಗಂಟೆಗೆ ನಡೆಯಲಿದೆ. ನಾಗಲಾಪುರ ವೀರ ಸಿಂಹಾಸನ ಸಂಸ್ಥಾನ ಮಠದ ಶ್ರೀ ತೇಜಶಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಮತ್ತು ಬೆಳ್ಳಾವಿ ಮಠದ ಶ್ರೀ ಮಹಾಂತ ಶಿವಾಚಾರ್ಯ ಮಹಾಸ್ವಾಮಿಗಳು ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಲಿದ್ದು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ನ ಅಧ್ಯಕ್ಷ ಡಾ. ಸಿ ಸೋಮಶೇಖರ್ ಐಎಎಸ್ ನಿವೃತ್ತ ರವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಗೌರವಾಧ್ಯಕ್ಷ ಬಿ.ಎಂ ಚೆನ್ನಪ್ಪ ಅಧ್ಯಕ್ಷತೆ ವಹಿಸಲಿದ್ದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ನ ಪ್ರಧಾನ ಕಾರ್ಯದರ್ಶಿ ಸೋಮಶೇಖರ್ ಶ್ರೀ ಗಾಂಜಿ, ಕೋಲಾರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಕೆ ಚಂದ್ರಶೇಖರ್, ಸಮಾಜಸೇವಕ ಮತ್ತು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಹಿರಿಯ ಉಪಾಧ್ಯಕ್ಷ ಸಿಎಂಆರ್ ಶ್ರೀನಾಥ್, ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

## ನೀರಾವರಿ ಅನುಕೂಲ ಇರುವ ರೈತರು ಅಗತ್ಯ ದಾಖಲೆ ನೀಡಿ ಮೇವಿನ ಬೀಜದ ಕಿಟ್ ಪಡೆಯಿರಿ–ಅಬೀದ್

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಶಿಡ್ಲಘಟ್ಟ:** ಈ ವರ್ಷ ಮಳೆ ಕೊರತೆಯಿಂದಾಗಿ ರಾಸುಗಳಿಗೆ ಮೇವಿನ ಕೊರತೆ ಕಾಡುತ್ತಿದೆ. ಆದರೂ ಕೊಳವೆಬಾವಿಯ ನೀರಿನ ಅನುಕೂಲ ಇರುವ ರೈತರು ವಿವಿಧ ರೀತಿಯ ಮೇವನ್ನು ಬೆಳೆಯುತ್ತಿದ್ದು ಸ್ವಲ್ಪ ಮಟ್ಟಿಗೆ ಅನುಕೂಲ ಆಗಿದೆ. ಆದರೂ ಹೈನುಗಾರರು ಆತಂಕಪಡಬೇಕಿಲ್ಲ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಎಸ್.ಎಸ್.ಅಬೀದ್ ತಿಳಿಸಿದರು.



ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಪಶು ವೈದ್ಯಕೀಯ ಇಲಾಖೆಯಿಂದ 2026–27ನೇ ಸಲಿನ ಮೇವಿನ ಬೀಜದ ಮಿನಿ ಕಿಟ್‌ಗಳನ್ನು ವಿತರಿಸಿ ಮಾತನಾಡಿದರು.

ಮುಂಗಾರು ಮಳೆಯ ತೀವ್ರ ಕೊರತೆಯ ಪರಿಣಾಮವನ್ನು ಇದೀಗ ಹೈನುಗಾರರು ಎದುರಿಸಬೇಕಾಗಿದೆ. ಮುಂಗಾರು ಮಳೆಯ ತೀವ್ರ ಅಭಾವ ಕಾಡಿದ್ದರಿಂದ ಆಗ ಬಹುತೇಕ ರೈತರು ಹೊಲ ಬಿತ್ತಿ ಬೆಳೆ ಬಿತ್ತಲು ಆಗದ ಕಾರಣ ಹಸಿರು ಮೇವಿನ ಕೊರತೆ ತೀವ್ರವಾಗಿ ಕಾಡುತ್ತಿದೆ ಎಂದರು.

ಕಳೆದ ವರ್ಷದ ದಾಸ್ತಾನು ಇಟ್ಟಿದ್ದ ಒಣ ಮೇವನ್ನು ಸಾಕಷ್ಟು ರೈತರು ಬಳಸುತ್ತಿದ್ದು ದಾಸ್ತಾನು ಕೂಡ ಖಾಲಿ ಆಗುತ್ತಿದೆ. ಕೊಳವೆಬಾವಿಯ ನೀರಿನ ಅನುಕೂಲ ಇರುವ ರೈತರು ಹಸಿರು ಮೇವನ್ನು ಬೆಳೆದಿದ್ದು ಅದು ಸ್ವಲ್ಪ ನೆಮ್ಮದಿ ತಂದಿದೆ. ಹಾಗಾಗಿ ಸರಕಾರವು ಪಶು ವೈದ್ಯಕೀಯ ಇಲಾಖೆಯಿಂದ ರೈತರಿಗೆ ಮೇವಿನ ಬೀಜದ ಮಿನಿ ಕಿಟ್ ವಿತರಿಸುತ್ತಿದೆ.ವರ್ಷಕ್ಕೆ 7 ಕಟಾವುಗಳನ್ನು ಮಾಡಬಹುದಾಗಿದ್ದು ಉತ್ತಮ ತಳಿಯ ಈ ಮೇವಿನ ಬೀಜದ ಕಿಟ್‌ಗಳನ್ನು ನೀರಿನ ಅನುಕೂಲ ಇರುವ ರೈತರು ಪಡೆದು ತಮ್ಮ ಜಮೀನುಗಳಲ್ಲಿ ಬೆಳೆದು ನೀವು ಬಳಸಿ ಇತರರಿಗೆ ಮಾರಾಟ ಮಾಡಿ ಎಂದು ಮನವಿ ಮಾಡಿದರು.

ಪಶು ವೈದ್ಯಕೀಯ ಸಹಾಯಕ ನಿರ್ದೇಶಕ ಡಾ.ಶ್ರೀನಾಥರೆಡ್ಡಿ ಮಾತನಾಡಿ, ತಾಲೂಕಿಗೆ 2026–27ನೇ ಸಾಲಿನಲ್ಲಿ 2450 ಮಿನಿ ಕಿಟ್‌ಗಳು ಬಂದಿದ್ದು ನೀರಾವರಿ ಅನುಕೂಲ ಇರುವ ರೈತರು ಅಗತ್ಯ ದಾಖಲೆಗಳನ್ನು ನೀಡಿ ಮೇವಿನ ಬೀಜದ ಕಿಟ್ ಪಡೆದುಕೊಳ್ಳಿ ಎಂದು ಕೋರಿದರು.

ಇಲಾಖೆಯಲ್ಲಿ ಅರ್ಜಿ ಸಿಗಲಿದ್ದು ಅರ್ಜಿಯನ್ನು ಭರ್ತಿ ಮಾಡಿ, ಆಧಾರ್ ಕಾರ್ಡ್ ಜೆರಾಕ್ಸ್, ನೀರಾವರಿ ಹೊಂದಿರುವ ಜಮೀನಿನ ಪಹಣಿ, ಫ್ರೂಟ್ಸ್ ಐಡಿ ಸಂಖ್ಯೆಯನ್ನು ನೀಡಿ ಮೇವಿನ ಬೀಜದ ಕಿಟ್ ಪಡೆದುಕೊಂಡು ಅನುಕೂಲ ಮಾಡಿಕೊಳ್ಳಿ ಎಂದು ರೈತರಲ್ಲಿ ಮನವಿ ಮಾಡಿದರು.

ಸಾಂಕೇತಿಕವಾಗಿ ರೈತರಿಗೆ ಮೇವಿನ ಬೀಜದ ಮಿನಿ ಕಿಟ್‌ಗಳನ್ನು ವಿತರಿಸಲಾಯಿತು. ತಾ.ಪಂ ಇಒ ಆರ್.ಹೇಮಾವತಿ, ತಹಸೀಲ್ದಾರ್ ಎನ್‌ಗಗನಸಿಂಧು, ಗ್ರೇಡ್–2 ತಹಸೀಲ್ದಾರ್ ಕೆ.ಎನ್.ಎಂ. ಮಂಜುನಾಥ್, ಕೃಷಿ ಸಹಾಯಕ ನಿರ್ದೇಶಕ ಪಿ. ರವಿ, ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಮಂಜುನಾಥ್, ಚಿಮುಲ್ ಶಿಬಿರ ಕಚೇರಿ ಉಪ ವ್ಯವಸ್ಥಾಪಕ ಡಾ.ರವಿಕಿರಣ್ ಇದ್ದರು.

## ದೆಹಲಿ ಹೋರಾಟ ಬೆಂಬಲಿಸಿ ಬಾಗೇಪಲ್ಲಿಯಲ್ಲಿ ಪ್ರತಿಭಟನೆ




**ಸ್ಕಂದಗಿರಿ ವಾಣಿ ಸುದ್ದಿಜಾಲ**

ಭಾಗ್ಯನಗರ: ಸಂವಿಧಾನ ವಿರೋಧಿ ಎಸ್.ಐ.ಆರ್ ರದ್ದುಗೊಳಿಸಬೇಕು ಮತ್ತು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಆಗ್ರಹಿಸಿ ದೆಹಲಿಯಲ್ಲಿ ನಡೆದ ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿ ಬಾಗೇಪಲ್ಲಿಯಲ್ಲಿ ಸಿಪಿಎಂ ಪಕ್ಷದ ನೇತೃತ್ವದಲ್ಲಿ ವಿವಿದ ಸಂಘಟನೆಗಳು ಪ್ರತಿಭಟನೆ ನಡೆಸಿದರು.

ಸಿಪಿಎಂ ಕಚೇರಿ ಸುಂದರಯ್ಯ ಭವನದಿಂದ ಮೆರವಣಿಗೆಯಲ್ಲಿ ಹೊರಟ ಸಿಪಿಎಂ, ಡಿವೈಎಫ್‌ಐ ಮತ್ತು ಎಸ್.ಎಫ್.ಐ ಸಂಘಟನೆಯ ಮುಖಂಡರು ಮತ್ತು ಕಾರ್ಯಕರ್ತರು ಮುಖ್ಯರಸ್ತೆಯಲ್ಲಿ ಮೆರವಣಿಗೆಯನ್ನು ನಡೆಸಿ ಪ್ರಧಾನಿ ನರೇಂದ್ರ ಮೋದಿ ವಿರುದ್ದ ಧಿಕ್ಕಾರಗಳನ್ನು ಕೂಗಿದರು.

ಸಿಪಿಎಂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಎಂ.ಪಿ.ಮುನಿವೆಂಕಟಪ್ಪ ಮಾತನಾಡಿ, ದೇಶದ ರಾಜಧಾನಿಯಲ್ಲಿ ಎಂದೂ ಕಂಡರಿಯದ ಸನ್ನಿವೇಶ ಸೃಷ್ಠಿಯಾಗಿದೆ. ಜಮ್ಮು–ಕಾಶ್ಮೀರದಿಂದ ಕನ್ಯಾಕುಮಾರಿ ವರೆಗೆ, ತ್ರಿಪುರದಿಂದ ಕೇರಳದವರೆಗೆ ಯುವಜನ ವಿದ್ಯಾರ್ಥಿಗಳು, ದೇಶಪ್ರೇಮಿ ಜನತೆ ಪ್ರಧಾನ ನರೇಂದ್ರ ಮೋದಿ ಸರ್ವಾಧಿಕಾರಿ ತನದ ವಿರುದ್ದ ಪ್ರತಿಭಟಿಸುತ್ತಿದ್ದಾರೆ. ಬ್ರಿಟಿಷರ ವಿರುದ್ದ 90 ವರ್ಷಗಳು ಸೆಣಸಾಡಿದ ದೇಶದರಾಜದಾನಿಯಲ್ಲಿ ಹೋರಾಟಕ್ಕೆ ಕೇಂದ್ರ ಸರ್ಕಾರ ಅವಕಾಶ ನೀಡದಿರುವುದು ವಿಶ್ವಗುರು ಎಂದು ಅಬ್ಬರಿಸುವ, ಬ್ರಿಟಿಷರ ಬೂಟು ನೆಕ್ಕುತ್ತಿದ್ದ ಆರ್.ಎಸ್.ಎಸ್ ವಿದ್ಯಾರ್ಥಿಗಳನ್ನು, ಪ್ರತಿಭಟನಾಕಾರರ ಮೇಲೆ ಲಾಠಿ ಪ್ರಹಾರ ಮಾಡುತ್ತಿದೆ.

ಕೇಂದ್ರ ಸರ್ಕಾರ ದೆಹಲಿಯನ್ನು ಯುದ್ಧ ಭೂಮಿಯಂತೆ ಬದಲಾಯಿಸಿ ಸಂವಿಧಾನ ಮತ್ತು ಪ್ರಜಾಪ್ರಭುತ್ವಕ್ಕೆ ಅವಮಾನ ಮಾಡಿದ್ದಾರೆ. 55 ಸಾವಿರ ಸೈನಿಕರು ಮತ್ತು ಪೊಲೀಸರನ್ನು ದೆಹಲಿಯಲ್ಲಿ ಇಟ್ಟಿರುವುದು ಯಾರ ವಿರುದ್ದ ಯುದ್ಧ ಮಾಡಲು, ಯಾರನ್ನು ನಾಶಮಾಡಲು ಎಂದು ಹೇಳಬೇಕಾಗಿದೆ, ಸಿಪಿಎಂ ಕಚೇರಿ ಸುತ್ತ ಸೈನ್ಯ ನಿಲ್ಲಿಸಲಾಗಿದೆ. ರಾಷ್ಟ್ರ–ರಾಜ್ಯ ನಾಯಕರು ಮತ್ತು ಮುಖಂಡರನ್ನು ಬಂಧಿಸಲಾಗಿದೆ ಎಂದರು.

ಡಿವೈಎಫ್‌ಐ ಜಿಲ್ಲಾಧ್ಯಕ್ಷ ಎಸ್.ರಾಜಶೇಖರ ಮಾತನಾಡಿ, ಈ ದೇಶದ ಆಸ್ತಿಯಾಗಿರುವ ಯುವಕರು ಮತ್ತು ವಿದ್ಯಾರ್ಥಿಗಳನ್ನು ಬಂಧಿಸಿದ್ದೇ ಅಲ್ಲದೆ ಭಯೋತ್ಪಾದಕರ ರೀತಿಯಲ್ಲಿ ನೋಡುತ್ತಿದ್ದಾರೆ ಎಂದು ಆರೋಪಿಸಿದರು.

ಮುಂದಿನ ದಿನಗಳಲ್ಲಿ ಹೋರಾಟಗಳು ಮತ್ತಷ್ಟು ಉಗ್ರ ರೂಪವನ್ನು ಪಡೆದುಕೊಳ್ಳುವುದೇ ಅಲ್ಲದೆ ಮುಖ್ಯ ಚುನಾವಣಾಧಿಕಾರಿ ಮತ್ತು ಪ್ರಧಾನಿ ನರೇಂದ್ರ ಮೋದಿ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಸುಪ್ರೀಂ ಕೋರ್ಟ ತರಾಟೆಗೆ ತೆಗೆದುಕೊಂಡರೂ ಕೇಂದ್ರ ಸರ್ಕಾರ ಕೇರ್ ಮಾಡಲಿಲ್ಲ.

ದೇಶದ ಪ್ರಜಾಪ್ರಭುತ್ವ ಉಳಿಸುವುದು ಪ್ರತಿಭಟನಾಕಾರರಿಗೆ ತಿಳಿದಿದೆ. ಗೊಡ್ಡು ಬೆದರಿಕೆಗಳಿಗೆ ಹೆದರುವುದಿಲ್ಲ ಎಂದರು. ಪ್ರತಿಭಟನೆಯಲ್ಲಿ ತಾ ಕಾರ್ಯದರ್ಶಿ ಎಂ.ಎನ್.ರಘುರಾಮರೆಡ್ಡಿ, ಎಸ್.ಎಫ್.ಐ ಜಿಲ್ಲಾ ಸಂಚಾಲಕ ಸೋಮಶೇಖರ್, ಚನ್ನರಾಯಪ್ಪ, ಡಿ.ಟಿ.ಮುನಿಸ್ವಾಮಿ, ಡಿಸಿ ಶ್ರೀನಿವಾಸ್, ಕೆ.ನಾಗರಾಜ್.ಕೃಷ್ಣಪ್ಪ, ಇಮ್ರಾನ್, ಕೃಷ್ಣಪ್ಪ,

ಮುನಿಯಪ್ಪ, ರಮಣಪ್ಪ, ಪಿ.ಓಬಳರಾಜು, ಎಚ್.ಎ.ರಾಮಲಿಂಗಪ್ಪ ಮತ್ತಿತರರು ಉಪಸ್ಥಿತರಿದ್ದರು.

# ನೂತನ ಪದಾಧಿಕಾರಿಗಳಿಗೆ ವೀರಶೈವ ಸಹಕಾರ ಬ್ಯಾಂಕ್‌ನಿಂದ ಸನ್ಮಾನ



ತುಮಕೂರು: ನಗರ ವೀರಶೈವ ಸಮಾಜ ಸೇವಾ ಸಮಿತಿಯ ಅಂಗ ಸಂಸ್ಥೆಯಾದ ಶ್ರೀ ರೇಣುಕಾ ವಿದ್ಯಾಪೀಠದ ಶಾಲಾ ಹಾಗೂ ಕಾಲೇಜು ಸಮಿತಿಯ ನೂತನ ಅಧ್ಯಕ್ಷರು, ಗೌರವ ಕಾರ್ಯದರ್ಶಿಯವರನ್ನು ನಗರದ ವೀರಶೈವ ಸಹಕಾರ ಬ್ಯಾಂಕಿನಿಂದ ಸನ್ಮಾನಿಸಿ ಗೌರವಿಸಲಾಯಿತು. ರೇಣುಕಾ ವಿದ್ಯಾಪೀಠ ಸಮಿತಿಗೆ ನೂತನವಾಗಿ ಆಯ್ಕೆಯಾದ ಅಧ್ಯಕ್ಷ ಟಿ.ಆರ್.ಲೋಕೇಶ್,ಗೌರವ ಕಾರ್ಯದರ್ಶಿ ಟಿ.ಜೆ.ಗಿರೀಶ್ ಹಾಗೂ ತುಮಕೂರು ಹೋಟೆಲ್ ಮತ್ತು ಉಪಹಾರ ಮಂದಿರಗಳ ಸಂಘದ ಉಪಾಧ್ಯಕ್ಷರಾಗಿ ಆಯ್ಕೆಆಗಿರುವ ಈ.ಎಸ್.ಸಂತೋಷ್‌ಕುಮಾರ್ ಇವರನ್ನು ವೀರಶೈವ ಸಹಕಾರ ಬ್ಯಾಂಕಿನಿಂದ ಅಭಿನಂದಿಸಲಾಯಿತು. ಬ್ಯಾಂಕಿನ ಅಧ್ಯಕ್ಷ ಕೆ.ಜೆ.ರುದ್ರಪ್ಪ, ಉಪಾಧ್ಯಕ್ಷ ಕೆ.ಮಲ್ಲಿಕಾರ್ಜುನಯ್ಯ(ಹೆಬ್ಬಾಕ) ಹಾಗೂ ಕಾರ್ಯಕಾರಿ ಮಂಡಳಿ ನಿರ್ದೇಶಕರುಗಳು, ಸಿಇಓ ಶ್ರೀಮತಿ ವೀಣಾ ಹಾಗೂ ಬ್ಯಾಂಕಿನ ಸಿಬ್ಬಂದಿಗಳು ಹಾಜರಿದ್ದರು.

# ಮಾಜಿ ಸಂಸದ ಪ್ರಜ್ವಲ್ ರೇವಣ್ಣಗೆ ನಿರಾಳ; ಬೆಳಗಾವಿಯ ಹಿಂಡಲಗಾ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸುವ ನಿರ್ಧಾರ ರದ್ದು!

ಬೆಳಗಾವಿ: ಅತ್ಯಾಚಾರ ಪ್ರಕರಣವೊಂದರಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಬೆಳಗಾವಿಯ ಹಿಂಡಲಗಾ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸುವ ನಿರ್ಧಾರವನ್ನು ಕಾರಾಗೃಹ ಅಧಿಕಾರಿಗಳು ರದ್ದುಗೊಳಿಸಿದ್ದಾರೆ.

ಮೂಲಗಳ ಪ್ರಕಾರ, ಪ್ರಜ್ವಲ್ ರೇವಣ್ಣ ಅವರ ಕೋಣೆಯಲ್ಲಿ ಮೊಬೈಲ್ ಫೋನ್ ಪತ್ತೆಯಾದ ಹಿನ್ನೆಲೆಯಲ್ಲಿ ಅವರನ್ನು ಹಿಂಡಲಗಾ ಜೈಲಿಗೆ ಸ್ಥಳಾಂತರಿಸುವಂತೆ ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಇಲಾಖೆ ಆದೇಶಿಸಿದ ಕೆಲವೇ ಗಂಟೆಗಳ ನಂತರ, ಶುಕ್ರವಾರ ಸಂಜೆ ಅಧಿಕಾರಿಗಳು ಅವರನ್ನು ಪರಪ್ಪನ ಅಗ್ರಹಾರ ಜೈಲಿನಲ್ಲಿಯೇ ಮುಂದುವರಿಸಲು ನಿರ್ಧರಿಸಿದ್ದಾರೆ.

ಸೆಂಟ್ರಲ್ ಕ್ರೈಮ್ ಬ್ರಾಂಚ್ (CCB) ತಂಡವೊಂದು



ಪರಪ್ಪನ ಅಗ್ರಹಾರ ಜೈಲಿನಲ್ಲಿ ನಡೆಸಿದ ಅನಿರೀಕ್ಷಿತ ಪರಿಶೀಲನೆ ವೇಳೆ ಪ್ರಜ್ವಲ್ ಮತ್ತು ಇನ್ನೊಬ್ಬ ವಿಚಾರಣಾಧೀನ ಕೈದಿ ಬಳಿ ಮೊಬೈಲ್ ಹಾಗೂ ಪೆನ್ ಡ್ರೈವ್ ಪತ್ತೆಯಾದ ನಂತರ ಈ ವರ್ಗಾವಣೆಯ ನಿರ್ಧಾರವನ್ನು ಕೈಗೊಳ್ಳಲಾಗಿತ್ತು.

ಪರಿಶೀಲನೆಯ ಸಮಯದಲ್ಲಿ ಪೊಲೀಸರು ಚಾರ್ಜರ್ ಮತ್ತು ನೋಟ್‌ಬುಕ್ ಅನ್ನು ಕೂಡ ವಶಪಡಿಸಿಕೊಂಡಿದ್ದು, ಇದು ಜೈಲಿನ ಭದ್ರತೆ ಹಾಗೂ ನಿಷೇಧಿತ ಎಲೆಕ್ಟ್ರಾನಿಕ್ ಸಾಧನಗಳ ಬಳಕೆಯ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಈ ವಸ್ತುಗಳು ಪತ್ತೆಯಾದ ಬೆನ್ನಲ್ಲೇ, ಪ್ರಜ್ವಲ್ ಅವರನ್ನು ಹಿಂಡಲಗಾ ಜೈಲಿಗೆ ಸ್ಥಳಾಂತರಿಸುವಂತೆ ಕಾರಾಗೃಹ ಇಲಾಖೆ ಡಿಜಿಪಿ ಅಲೋಕ್?ಕುಮಾರ್ ಅವರು ಶುಕ್ರವಾರ ಈ ಆದೇಶ ಹೊರಡಿಸಿದ್ದರು ಎಂದು ವರದಿಯಾಗಿದೆ.

ಬೆಳಗಾವಿ ಜೈಲು ಅಧಿಕಾರಿಗಳಿಗೆ ಅಧಿಕೃತ ಇಮೇಲ್ ಕಳುಹಿಸಲಾಗಿತ್ತು ಮತ್ತು ಸೂಕ್ತ ಭದ್ರತೆಯೊಂದಿಗೆ (ಎಸ್ಕಾರ್ಟ್) ಅವರನ್ನು ಸ್ಥಳಾಂತರಿಸಲು ಅಗತ್ಯ ವ್ಯವಸ್ಥೆಗಳನ್ನು ಮಾಡುವಂತೆ ಜೈಲು ಅಧೀಕ್ಷಕರಿಗೆ ಸೂಚಿಸಲಾಗಿತ್ತು. ಆದಾಗ್ಯೂ, ಪ್ರಸ್ತಾಪಿತ ವರ್ಗಾವಣೆಯನ್ನು ರದ್ದುಗೊಳಿಸಲಾಗಿದ್ದು, ಪ್ರಜ್ವಲ್ ಪರಪ್ಪನ ಅಗ್ರಹಾರ ಜೈಲಿನಲ್ಲಿಯೇ ತನ್ನ ಶಿಕ್ಷೆಯನ್ನು ಮುಂದುವರಿಸಲಿದ್ದಾರೆ ಎನ್ನಲಾಗಿದೆ.

# 'ನ್ಯಾಯಾಂಗ ತನಿಖೆಗೆ ಒಪ್ಪಿಸಿ, 1 ಕೋಟಿ ಪರಿಹಾರ ನೀಡಿ'

## ಹನೂರು ಶೂಟೌಟ್ ಪ್ರಕರಣದ ಮಹಿಮಾ ದಾಸ್ ಸೇರಿ ಸಂತ್ರಸ್ತರ ಆಗ್ರಹ

ಬೆಂಗಳೂರು: ಆಗಸ್ಟ್ 15 ರಂದು ಹನೂರಿನಲ್ಲಿ ನಡೆದಿದೆ ಎನ್ನಲಾದ ಎನ್‌ಕೌಂಟರ್‌ನಲ್ಲಿ ಮೂವರು ಮೃತಪಟ್ಟಿದ್ದು, ಅದರಿಂದ ಪಾರಾದ ಮಹಿಮಾ ದಾಸ್, ಅರಣ್ಯದಲ್ಲಿ ಮಲಗಿದ್ದಾಗ ಗುಂಡಿನ ಸದ್ದು ಕೇಳಿ ಅಲ್ಲಿಂದ ಓಡಿಹೋಗಿದ್ದಾಗಿ ತಿಳಿಸಿದ್ದಾರೆ. ಶುಕ್ರವಾರ 'ಕರ್ನಾಟಕ ಪ್ರಾಂತ ರೈತ ಸಂಘ' ಮತ್ತು 'ಆಲ್ ಇಂಡಿಯಾ ಲಾಯರ್ಸ್ ಯೂನಿಯನ್' ಆಯೋಜಿಸಿದ್ದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ತಮಗೆ ನ್ಯಾಯ ಒದಗಿಸುವಂತೆ ಆಗ್ರಹಿಸಿದರು.

ಚಾಮರಾಜನಗರ ಜಿಲ್ಲೆಯ ಹನೂರಿನಲ್ಲಿರುವ ಕಾವೇರಿ ವನ್ಯಜೀವಿ ಧಾಮದಲ್ಲಿ ನಡೆದಿದೆ ಎನ್ನಲಾದ ಈ ಎನ್‌ಕೌಂಟರ್‌ನಲ್ಲಿ ಆಂಥೋನಿ ಸ್ವಾಮಿ, ಡೇವಿಡ್ ಸೆಬಾಸ್ಟಿಯನ್ ಕುಮಾರ್ ಮತ್ತು ಜಾನ್ ರೋಸ್ ಪೀಟರ್ ಅವರನ್ನು ಗುಂಡಿಕ್ಕಿ ಕೊಲ್ಲಲಾಗಿತ್ತು.

ಈ ಹತ್ಯೆಗಳ ಕುರಿತು ಹೈಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ಸಮಗ್ರ ನ್ಯಾಯಾಂಗ ತನಿಖೆ ನಡೆಸಬೇಕು, ಆರೋಪಿಗಳನ್ನು ಬಂಧಿಸಬೇಕು, ಮೃತರ ಪ್ರತಿಯೊಂದು ಕುಟುಂಬಕ್ಕೂ 1 ಕೋಟಿ ರೂಪಾಯಿ ಪರಿಹಾರ ನೀಡಬೇಕು ಹಾಗೂ ಸಂತ್ರಸ್ತ ಕುಟುಂಬದ ಒಬ್ಬ ಸದಸ್ಯರಿಗೆ ಸರ್ಕಾರಿ ಉದ್ಯೋಗ ಕಲ್ಪಿಸಬೇಕು ಎಂದು ಸಂಘಟನೆಗಳು ಆಗ್ರಹಿಸಿದವು.

ಆಗಸ್ಟ್ 13 ರಂದು ಆಂಥೋನಿ ಸ್ವಾಮಿ ಅವರಿಗೆ ಸೇರಿದ ಎರಡು ಹಸುಗಳು ಕಾಣೆಯಾಗಿದ್ದವು. ಹಸುಗಳು ಹಿಂತಿರುಗದಿದ್ದರಿಂದ, ಅವುಗಳನ್ನು ಹುಡುಕಲು ಸ್ವಾಮಿ ಅವರು ದಾಸ್ ಮತ್ತು ಇತರ



ಇಬ್ಬರನ್ನು ಸಂಪರ್ಕಿಸಿದರು. ಆಗಸ್ಟ್ 14 ರಂದು ಸಂಜೆ 5 ಗಂಟೆ ಸುಮಾರಿಗೆ, ಕಾಣೆಯಾದ ಜಾನುವಾರುಗಳನ್ನು ಹುಡುಕಲು ಅರಣ್ಯದೊಳಗೆ ತೆರಳಿದೆವು. ಕುಮಾರ್ ಮತ್ತು ನಾನು ಒಂದು ತಂಡದಲ್ಲಿದ್ದೆವು, ಉಳಿದಿಬ್ಬರು ಪ್ರತ್ಯೇಕವಾಗಿ ಹುಡುಕಾಟ ನಡೆಸಿದರು. ಹುಡುಕಾಟದ ನಂತರ ನಿರ್ದಿಷ್ಟ ಸ್ಥಳವೊಂದರಲ್ಲಿ ಭೇಟಿಯಾಗಲು ನಾವು ನಿರ್ಧರಿಸಿದೆವು. ನಂತರ ನಾವು ಭೇಟಿಯಾದೆವು; ಆದರೆ ನಾನು ವಯಸ್ಸಾದವನಾಗಿದ್ದರಿಂದ ಮತ್ತು ನಾವೆಲ್ಲರೂ ದಣಿದಿದ್ದೆವು. ಅಲ್ಲದೆ, ಕತ್ತಲಾಗುತ್ತಿದ್ದುದರಿಂದ, ಸ್ವಲ್ಪ ವಿಶ್ರಾಂತಿ ಪಡೆಯಲು ನಿರ್ಧರಿಸಿದೆವು' ಎಂದು ದಾಸ್ ತಿಳಿಸಿದರು.

'ಆ ತಡರಾತ್ರಿ, ಗುಂಡಿನ ಸದ್ದು ಕೇಳಿ ನಾನು ಪ್ರಾಣ ಉಳಿಸಿಕೊಳ್ಳಲು ಓಡಿಹೋದೆ ಮತ್ತು ಕಾಡಿನಲ್ಲಿ ಅಡಗಿಕೊಂಡೆ. ಅರಣ್ಯ ಇಲಾಖೆಯ ಜೀಪ್‌ವೊಂದು ಹತ್ತಿರದಲ್ಲಿ ಹೋಗುವುದನ್ನು ಕಂಡಾಗ, ಅಧಿಕಾರಿಗಳನ್ನು ಸಂಪರ್ಕಿಸಿ ನಾವೇಕೆ ಅಲ್ಲಿಗೆ ಬಂದಿದ್ದೆವು ಎಂಬುದನ್ನು ವಿವರಿಸುವ ಬಗ್ಗೆ ಯೋಚಿಸಿದೆ; ಆದರೆ ಭಯದಿಂದಾಗಿ ನಾನು ಅಡಗಿಕೊಂಡೆ. ನಂತರ, ಇತರರ ಸಹಾಯದಿಂದ ನಾನು ಗ್ರಾಮಸ್ಥರನ್ನು ಸಂಪರ್ಕಿಸಿದೆ. ಅಷ್ಟರವರೆಗೆ, ಉಳಿದವರು ಮೃತಪಟ್ಟಿದ್ದರು ಎಂಬ ವಿಷಯ ನನಗೆ ತಿಳಿದಿರಲಿಲ್ಲ' ಎಂದರು.

'ನನಗೆ ಮೂವರು ಮಕ್ಕಳಿದ್ದಾರೆ ಮತ್ತು ಈ ಪ್ರಕರಣದಲ್ಲಿ ನ್ಯಾಯ ಸಿಗಬೇಕೆಂದು ನಾನು ಆಗ್ರಹಿಸುತ್ತೇನೆ' ಎಂದು ಲೂರ್ಡ್ ಮೇರಿ ಹೇಳಿದರು.

'ಈ ಘಟನೆಯು ನರಹತ್ಯೆಯೇ ಅಥವಾ ಜನಾಂಗೀಯ ಹತ್ಯೆಯೇ ಎಂದು ನಿರ್ಧರಿಸುವುದು ಕಷ್ಟ. ನಾನು ಮರಣೋತ್ತರ ಪರೀಕ್ಷಾ ವರದಿಗಳನ್ನು ಪರಿಶೀಲಿಸಿದ್ದೇನೆ;

ಅವುಗಳಲ್ಲಿ ಗುಂಡು ದೇಹವನ್ನು ಪ್ರವೇಶಿಸಿದ ಗಾಯಗಳು ಮತ್ತು ಪೆಲೆಟ್ ಗಾಯಗಳ ಉಲ್ಲೇಖವಿದೆ. ವೈದ್ಯರ ಪ್ರಕಾರ, ಇದು ಅತ್ಯಂತ ಹತ್ತಿರದಿಂದ ನಡೆಸಿದ ಗುಂಡಿನ ದಾಳಿಯಾಗಿದೆ. ಅರಣ್ಯ ಇಲಾಖೆ ಅಧಿಕಾರಿಗಳು 'ಸಿಂಗಲ್-ಸ್ಲೈಡ್ ಪಂಪ್-ಆಕ್ಷನ್ ಶಾಟ್‌ಗನ್' ಅನ್ನು ಬಳಸಿದ್ದಾರೆ ಎಂದು ಆರೋಪಿಸಲಾಗಿದೆ. ಕಾನೂನು ರಕ್ಷಕರೇ ಕಾನೂನು ಉಲ್ಲಂಘಕರಾಗಿರುವ ಪ್ರಕರಣವಿದು. ಸಂತ್ರಸ್ತರು ನಿದ್ರಿಸುತ್ತಿದ್ದಾಗ ಅವರನ್ನು ಕೊಲ್ಲಲಾಯಿತು. ಅವರನ್ನು ಗುಂಡಿಕ್ಕಿದ ವ್ಯಕ್ತಿಯ ಮನಸ್ಥಿತಿ ಹೇಗಿದ್ದಿರಬಹುದು?' ಎಂದು ವಕೀಲ ಎಸ್. ಬಾಲನ್ ಹೇಳಿದರು.

# ವಿದ್ಯಾರ್ಥಿಗಳ ಸೃಜನಶೀಲತೆಗೆ ಚಿತ್ರಕಲಾ ಶಿಬಿರ ಉತ್ತಮ ವೇದಿಕೆ: ರಂಗದಾಸಪ್ಪ



ಗುಬ್ಬಿ: ವಿದ್ಯಾರ್ಥಿಗಳಲ್ಲಿ ಪಠ್ಯ ಚಟುವಟಿಕೆಗಳ ಜತೆಗೆ ವಿವಿಧ ಕಲಾ ಪ್ರಕಾರಗಳ ಬಗ್ಗೆ ಆಸಕ್ತಿ ಬೆಳೆಸುವುದು ಅಗತ್ಯ. ಚಿತ್ರಕಲೆ ಮಕ್ಕಳ ಕಲ್ಪನಾಶಕ್ತಿ, ಏಕಾಗ್ರತೆ ಹಾಗೂ ಅಭಿವ್ಯಕ್ತಿ ಸಾಮರ್ಥ್ಯವನ್ನು ವೃದ್ಧಿಸುತ್ತದೆ. ಎಂದು

ಡಿಡಿಪಿಐ ಕಚೇರಿ ತುಮಕೂರಿನ ಶಿಕ್ಷಣಾಧಿಕಾರಿ ರಂಗದಾಸಪ್ಪ ಎ.ಟಿ. ತಿಳಿಸಿದರು.

ತಾಲ್ಲೂಕಿನ ಚೇಳೂರು ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಣ ಇಲಾಖೆ, ಹಾಗೂ ಚಿತ್ರಕಲಾ ಸಂಘ ಹಾಗೂ ಪ್ರೌಢಶಾಲೆಯ ವತಿಯಿಂದ ?ವರ್ಣ ಸಂಭ್ರಮ?2026? ಶೀರ್ಷಿಕೆಯಡಿ ಆಯೋಜಿಸಿದ್ದ ಮೂರು ದಿನಗಳ ಚಿತ್ರಕಲಾ ಶಿಬಿರ ಹಾಗೂ ಚಿತ್ರಕಲಾ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು ವಿದ್ಯಾರ್ಥಿಗಳಲ್ಲಿರುವ ಸೃಜನಶೀಲ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಚಿತ್ರಕಲಾ ಶಿಬಿರಗಳನ್ನು ನಿರಂತರವಾಗಿ ಆಯೋಜಿಸಬೇಕು. ಇಂತಹ ಚಟುವಟಿಕೆಗಳು ಮಕ್ಕಳ ಪ್ರತಿಭೆ ಅನಾವರಣಕ್ಕೆ ಉತ್ತಮ ವೇದಿಕೆಯಾಗುತ್ತವೆ.

ಗ್ರಾಮೀಣ ಭಾಗದ ವಿದ್ಯಾರ್ಥಿಗಳಲ್ಲಿಯೂ ಅಪಾರ ಪ್ರತಿಭೆ ಅಡಗಿದ್ದು, ಅವರಿಗೆ ಸೂಕ್ತ ತರಬೇತಿ ಹಾಗೂ ವೇದಿಕೆ ದೊರೆತಾಗ ತಮ್ಮ ಸಾಮರ್ಥ್ಯವನ್ನು ಪರಿಣಾಮಕಾರಿಯಾಗಿ ಪ್ರದರ್ಶಿಸಲು ಸಾಧ್ಯವಾಗುತ್ತದೆ ಎಂದರು.

ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು ಸದಸ್ಯ ಮನು ಚಕ್ರವರ್ತಿ ಮಾತನಾಡಿ ಮಕ್ಕಳಿಗೆ ವಿವಿಧ ಕ್ಷೇತ್ರಗಳ ಸಾಮಾಜಿಕ ವಿಚಾರಗಳನ್ನು ಪರಿಚಯಿಸಿ, ಅವರ ಕಲ್ಪನೆ ಹಾಗೂ ಸೃಜನಶೀಲತೆಯನ್ನು ಅಭಿವ್ಯಕ್ತಪಡಿಸಲು ಅವಕಾಶ ನೀಡಿದಾಗ ಅವರ ಜ್ಞಾನ ವೃದ್ಧಿಯಾಗುವುದರ ಜೊತೆಗೆ ಸಮಾಜದಲ್ಲಿ ಹೊಸ ಬದಲಾವಣೆ ತರಲು ಸಹಕಾರಿಯಾಗುತ್ತದೆ.

ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ವಿಭಿನ್ನ ಪ್ರತಿಭೆ ಮತ್ತು ಸೃಜನಶೀಲತೆ ಅಡಗಿರುತ್ತದೆ. ಆ ಪ್ರತಿಭೆಗೆ ಸೂಕ್ತ ವೇದಿಕೆ ಕಲ್ಪಿಸುವುದು ಅತ್ಯಂತ ಮುಖ್ಯ. ಎಂದರು.

ಶಿಬಿರದ ವಿಶೇಷ ಆಕರ್ಷಣೆಯಾಗಿ ವಿದ್ಯಾರ್ಥಿಗಳಿಗೆ ತೊಗಲುಗೊಂಬೆ ಕಲಾಕೃತಿ ರಚನೆಯ ಪ್ರಾತ್ಯಕ್ಷಿಕೆ ನೀಡಲಾಯಿತು. ಚಿಕ್ಕಮಗಳೂರು ಸರ್ಕಾರಿ ಶಾಲೆಯ ಶಿಕ್ಷಕ ಸತ್ಯಪ್ರಕಾಶ್ ಅವರು ತೊಗಲುಗೊಂಬೆಯ ತಯಾರಿಕೆಯ ವಿಧಾನ ಹಾಗೂ ಅದರ ಇತಿಹಾಸದ ಕುರಿತು ಮಕ್ಕಳಿಗೆ ಮಾಹಿತಿ ನೀಡುವುದರ ಜೊತೆಗೆ ಪ್ರಾತ್ಯಕ್ಷಿಕೆ ಮೂಲಕ ತರಬೇತಿ ನೀಡಿದರು. ವಿದ್ಯಾರ್ಥಿಗಳು ತೊಗಲಿನ ಮೇಲೆ ವಿವಿಧ ಪೌರಾಣಿಕ ದೃಶ್ಯಗಳನ್ನು ಚಿತ್ರಿಸಿ ತಮ್ಮ ಕಲಾ ಪ್ರತಿಭೆಯನ್ನು ಪ್ರದರ್ಶಿಸಿದರು.

ಚಿತ್ರಕಲಾ ಶಿಕ್ಷಕ ಕೆಎಂ ರವೀಶ್ ಮಾತನಾಡಿ ನಿಸರ್ಗ, ಪರಿಸರ, ವಸ್ತುಚಿತ್ರ, ಜನಜಾಗೃತಿ, ಗ್ರಾಮೀಣ ಜನಜೀವನ, ಜನಪದ ಹಾಗೂ ಪೌರಾಣಿಕ ವಿಷಯಗಳನ್ನು ಆಧರಿಸಿ ವಿದ್ಯಾರ್ಥಿಗಳು ವೈವಿಧ್ಯಮಯ ಕಲಾಕೃತಿಗಳನ್ನು ರಚಿಸುವರು. 12 ಶಾಲೆಗಳ ಸುಮಾರು 80 ವಿದ್ಯಾರ್ಥಿಗಳು ಶಿಬಿರದಲ್ಲಿ ಭಾಗವಹಿಸಿ, ತಮ್ಮ ಕಲ್ಪನೆ ಹಾಗೂ ಭಾವನೆಗಳನ್ನು ರೇಖೆ ಮತ್ತು ವರ್ಣಗಳ ಮೂಲಕ ಕ್ಯಾನ್ವಾಸ್ ಮೇಲೆ ಮಂಡಿಸುತ್ತಾರೆ. ಎಂದರು.

ಈ ಸಂದರ್ಭದಲ್ಲಿ ಚಿತ್ರಕಲಾ ಶಿಕ್ಷಕ ಎಸ್.ವಿ. ಆನಂದ್, ಡಿ. ಜಗದೀಶ್, ರಂಗಸ್ವಾಮಿ, ಕಮಲಾ ಬಿ., ಸವಿತಾ ಎಸ್. ಕಾಂದರೆ, ಸತ್ಯಪ್ರಕಾಶ್, ಮಹೇಶ್, ಗಣೇಶ್‌ಗುಡಿ, ಹೇಮಾ ಪಿ., ಕುಮಾರಸ್ವಾಮಿ ಟಿ. ಹಾಗೂ ಕಲಾವಿದ ಕೃಷ್ಣಪ್ಪ, ಮುಖ್ಯೋಪಾಧ್ಯಾಯರು, ಶಿಕ್ಷಕರು, ವಿದ್ಯಾರ್ಥಿಗಳು ಸೇರಿದಂತೆ ಇನ್ನಿತರರು ಹಾಜರಿದ್ದರು.

# ಬಿಜಿಎಂಎಲ್ ಕಾರ್ಮಿಕರ ಕುಟುಂಬಗಳ ಸಮಸ್ಯೆ ಪರಿಹಾರಕ್ಕೆ ದಕ್ಷಿಣ ರಾಜ್ಯಗಳ ಸಹಕಾರ ಅಗತ್ಯ: ಜ್ಯೋತಿಬಾಸು

ಕೆಜಿಎಫ್: ಬಿಜಿಎಂಎಲ್ ಚಿನ್ನದ ಗಣಿಗಾರಿಕೆ ಸ್ಥಗಿತಗೊಂಡು ಸುಮಾರು 25 ವರ್ಷಗಳು ಕಳೆದಿದ್ದರೂ, ಕಾರ್ಮಿಕರ ಕುಟುಂಬಗಳು ವಾಸಿಸುತ್ತಿರುವ ಮನೆಗಳ ಮಾಲೀಕತ್ವ ಹಾಗೂ ಮೂಲಭೂತ ಸೌಕರ್ಯಗಳ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ದೊರೆತಿಲ್ಲ. ಈ ಸಮಸ್ಯೆಗಳನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದು ಕಾರ್ಮಿಕ ಕುಟುಂಬಗಳಿಗೆ ನ್ಯಾಯ ಒದಗಿಸುವ ಉದ್ದೇಶದಿಂದ ದಕ್ಷಿಣ ಭಾರತದ ರಾಜ್ಯಗಳ ಮುಖ್ಯಮಂತ್ರಿಗಳ ಸಹಕಾರ ಕೋರಲಾಗುವುದು ಎಂದು ಸೇವ್ ಕೆಜಿಎಫ್ ಕಮಿಟಿ ಅಧ್ಯಕ್ಷ ಜ್ಯೋತಿಬಾಸು ತಿಳಿಸಿದರು.

ಕೆಜಿಎಫ್‌ನ ಗಣಿಗಾರಿಕೆ ಪ್ರದೇಶಗಳಲ್ಲಿ ಇಂದಿಗೂ ರಸ್ತೆ, ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲಸೌಕರ್ಯಗಳ ಕೊರತೆ ಇದೆ. ಚುನಾವಣೆ ಸಂದರ್ಭದಲ್ಲಿ ಕಾರ್ಮಿಕರ ಮತಗಳನ್ನು ಪಡೆಯುವ ಜನಪ್ರತಿನಿಧಿಗಳು, ಚುನಾವಣೆ ಬಳಿಕ ಅವರ ಸಮಸ್ಯೆಗಳಿಗೆ ಸೂಕ್ತವಾಗಿ ಸ್ಪಂದಿಸುತ್ತಿಲ್ಲ. ಬೆಮಲ್ ಗುತ್ತಿಗೆ ಕಾರ್ಮಿಕರಿಗೆ ಕನಿಷ್ಠ ವೇತನ ನೀಡುವುದು, ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸುವುದು ಹಾಗೂ ಕಾರ್ಮಿಕ ಕುಟುಂಬಗಳ ಮನೆಗಳ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವುದು ತುರ್ತು ಅಗತ್ಯವಾಗಿದೆ ಎಂದು ಅವರು ಒತ್ತಾಯಿಸಿದರು.

ನಗರಸಭೆ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಬಿಜಿಎಂಎಲ್ ಆಡಳಿತ ಮಂಡಳಿಯಿಂದ ಸುಮಾರು ?80 ಕೋಟಿ ತೆರಿಗೆ ಬಾಕಿ ಇರುವುದನ್ನು ಅಧಿಕಾರಿಗಳು ಕಾರಣವಾಗಿ ಮುಂದಿಡುತ್ತಿದ್ದಾರೆ. ಆದರೆ, ತೆರಿಗೆ ಬಾಕಿಯ



ನೆಪದಲ್ಲಿ ಗಣಿಗಾರಿಕೆ ಪ್ರದೇಶದ ನಿವಾಸಿಗಳು ಮೂಲಸೌಕರ್ಯಗಳಿಂದ ವಂಚಿತರಾಗಬಾರದು. ಪ್ರತಿಯೊಬ್ಬ ನಾಗರಿಕನಿಗೂ ಅಗತ್ಯ ಸೌಲಭ್ಯಗಳನ್ನು ಒದಗಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ರಾಜಕೀಯೇತರ ಹೋರಾಟಕ್ಕೆ ಒತ್ತು

ಸೇವ್ ಕೆಜಿಎಫ್ ಕಮಿಟಿಯ ಹೋರಾಟ ಯಾವುದೇ ರಾಜಕೀಯ ಉದ್ದೇಶದಿಂದ ಕೂಡಿಲ್ಲ. ಕೆಜಿಎಫ್ ನಾಗರಿಕರಿಗೆ ಉತ್ತಮ ವಾತಾವರಣ ಹಾಗೂ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವುದರ ಜೊತೆಗೆ, ಬಿಜಿಎಂಎಲ್ ಕಾರ್ಮಿಕರ ಕುಟುಂಬಗಳ ದೀರ್ಘಕಾಲದ ಸಮಸ್ಯೆಗಳಿಗೆ ನ್ಯಾಯಯುತ ಪರಿಹಾರ ದೊರಕಿಸಿಕೊಡುವುದೇ ಸಮಿತಿಯ ಮುಖ್ಯ ಗುರಿಯಾಗಿದೆ ಎಂದು ಜ್ಯೋತಿಬಾಸು ಸ್ಪಷ್ಟಪಡಿಸಿದರು.

ಈ ಹಿನ್ನೆಲೆಯಲ್ಲಿ ದಕ್ಷಿಣ ಭಾರತದ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಕೆಜಿಎಫ್‌ನ ಸಮಸ್ಯೆಗಳು, ಬಿಜಿಎಂಎಲ್ ಕಾರ್ಮಿಕ ಕುಟುಂಬಗಳ ಸ್ಥಿತಿಗತಿ ಹಾಗೂ ಸಂಬಂಧಿತ ನ್ಯಾಯಾಲಯದ ಆದೇಶಗಳ ಪ್ರತಿಗಳನ್ನು ಅಂಚೆ ಮೂಲಕ ಕಳುಹಿಸಿ, ಸಮಸ್ಯೆಗಳ ಗಂಭೀರತೆಯನ್ನು ಮನವರಿಕೆ ಮಾಡಲು ನಿರ್ಧರಿಸಲಾಗಿದೆ. ಮುಂದಿನ ಹಂತದಲ್ಲಿ ಆಯಾ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ಪ್ರಧಾನಮಂತ್ರಿಗಳನ್ನು ಖುದ್ದಾಗಿ ಭೇಟಿ ಮಾಡಿ, ಮನೆಗಳ ಮಾಲೀಕತ್ವ ಸೇರಿದಂತೆ ಕಾರ್ಮಿಕ ಕುಟುಂಬಗಳ ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟು ಶಾಶ್ವತ ಪರಿಹಾರಕ್ಕಾಗಿ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಕರುಣಾಮೂರ್ತಿ. ಸಿಂಗೋ ಟನ್. ಶಿವಕುಮಾರ್. ತಿರುಮರುಗನ್. ಕಮಲ್ ಮುನಿಸ್ವಾಮಿ. ದಡಿ ಅನ್ಬು ಇನ್ನು ಹಲವರು ಭಾಗವಹಿಸಿದ್ದರು

# ಅಂದ್ರಹಳ್ಳಿಯಲ್ಲಿ 10ನೇ ವರ್ಷದ ಅದ್ದೂರಿ ವಿಶ್ವಕರ್ಮ ಜಯಂತ್ಯೋತ್ಸವ: ಕವಿತ ಆಚಾರ್ಯ

ಬೆಂಗಳೂರು : ಮಾಜಿ ಸಚಿವ ಹಾಗೂ ಯಶವಂತಪುರ ವಿಧಾನಸಭಾ ಕ್ಷೇತ್ರದ ಶಾಸಕ ಎಸ್ ಟಿ ಸೋಮಶೇಖರ್ ಅವರ ಮಾರ್ಗದರ್ಶನ ಸಹಕಾರ ಮತ್ತು ಅವರ ಕೃಪೆಯಿಂದ ಅಂದ್ರಹಳ್ಳಿ ವಿಶ್ವಕರ್ಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹಾಗೂ ಭೈರವೇಶ್ವರ ಟಿಂಬರ್ಸ ಮಾಲೀಕ ಹೇಮಂತ್ ಮತ್ತು ಮಹಿಳಾ ಅಧ್ಯಕ್ಷೆ ಶ್ರೀಮತಿ ಕವಿತಾ ಸ್ವಾಮಿ ಆಚಾರ್ಯ ಹಾಗೂ ಸಂಘದ ಪದಾಧಿಕಾರಿಗಳ ನೇತೃತ್ವದಲ್ಲಿ ದಿನಾಂಕ 11-10-2026ರಂದು ಭಾನುವಾರ11-30ಕ್ಕೆ ಅಂದ್ರಹಳ್ಳಿಯ ಎಜಿಎನ್ ಕನ್ವೆನ್ಷನ್ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅಂದ್ರಹಳ್ಳಿ ವಿಶ್ವಕರ್ಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹೇಮಂತ್ ತಿಳಿಸಿದ್ದಾರೆ.



ಈ ಕಾರ್ಯಕ್ರಮ ದಿವ್ಯ ಸಾನ್ನಿಧ್ಯ ಪರಮ ಪೂಜ್ಯ ಅನಂತ ಶ್ರೀ ವಿಭೂಷಿತ ಶಿವ ಸುಜ್ಞಾನ ತೀರ್ಥ ಮಹಾ ಸ್ವಾಮಿಗಳು ಮತ್ತು ಪೂಜ್ಯ ಶ್ರೀಶ್ರೀ ಜ್ಞಾನ ಘನವಿದ್ಯಾ ತೀರ್ಥ ಮಹಾ ಸ್ವಾಮಿಗಳು ವಿಶ್ವ ಬ್ರಾಹ್ಮಣ ಮಹಾಸಭಾ ಸಂಸ್ಥಾನ ವಿಶ್ವಕರ್ಮ ಜಗದ್ಗುರು ಪೀಠ ಅರೇಮಾದನಹಳ್ಳಿ ಮಠ, ಅಧ್ಯಕ್ಷತೆ ಮಾಜಿ ಸಚಿವರು ಯಶವಂತಪುರ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರಾದ ಎಸ್ ಟಿ ಸೋಮಶೇಖರ್ ಗೌಡ್ರು, ಮುಖ್ಯ ಅತಿಥಿಗಳಾಗಿ ಡಿಕೆ ಸುರೇಶ್ ಮಾಜಿ ಸಂಸದರು ಅಧ್ಯಕ್ಷರು ಬಮುಲ್, ಉದ್ಘಾಟನೆ ಪಿ ಸುಜ್ಞಾನ ಮೂರ್ತಿ ಅಧ್ಯಕ್ಷರು ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ ಕರ್ನಾಟಕ ಸರ್ಕಾರ, ಕುಸುಮ ಹನುಮಂತರಾಯಪ್ಪ ಕಾಂಗ್ರೆಸ್ ಮಹಿಳಾ ಮುಖಂಡರು ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರ, ನೆ.ಲ ರಾಮ್ ಪ್ರಸಾದ್ ಗೌಡ ರಾಜ್ಯಾಧ್ಯಕ್ಷರು ಯುವ ಕನ್ನಡಿಗರ ಸೇನೆ, ಪ್ರಸನ್ನಕುಮಾರ್ ಆರ್ ರಾಜ್ಯಾಧ್ಯಕ್ಷರು ಕೆಪಿಸಿಸಿ ಕುಶಲ ಕರ್ಮಿಗಳ ವಿಭಾಗ, ನಿಶಾಂತ್ ಸೋಮಶೇಖರ್ ಗೌಡ್ರು ಯುವ ಮುಖಂಡ, ಹನುಮಂತೇಗೌಡ್ರು ಮಾಜಿ ಪಾಲಿಕೆ ಸದಸ್ಯರು, ಪ್ರಕಾಶ್ ಟಿ ಕಾಂಗ್ರೆಸ್ ಮುಖಂಡರು ಹಾಗೂ ಜಿಬಿಎ ಪ್ರಭಲ ಆಕಾಂಕ್ಷಿ ಅಭ್ಯರ್ಥಿ ಅಂದ್ರಹಳ್ಳಿ ವಾರ್ಡ್, ಶ್ರೀ ನಿವಾಸ್ ಆರ್ ಕಾಂಗ್ರೆಸ್ ಮುಖಂಡರು ಹಾಗೂ ಜಿಬಿಎ ಪ್ರಬಲ ಆಕಾಂಕ್ಷಿ ಅಭ್ಯರ್ಥಿ ಹೇರೋಹಳ್ಳಿ ವಾರ್ಡ್ ಸೇರಿದಂತೆ ವಿವಿಧ ರಾಜಕೀಯ, ಸಂಘಟನೆಗಳ ಎಲ್ಲಾ ಸಮುದಾಯಗಳ ಮುಖಂಡರು ಮಹಿಳೆಯರು ಕಾರ್ಯಕರ್ತರು ಭಾಗವಹಿಸಲಿದ್ದಾರೆ.

ಅದಲ್ಲದೆ ಬೆಳ್ಳಿ ರಥದೊಂದಿಗೆ ಭಗವಾನ್ ವಿರಾಟ್ ವಿಶ್ವಕರ್ಮ ಭಾವಚಿತ್ರ ರಾಜ್ ಬೀದಿ ಗಳು ಕಲಾ ತಂಡಗಳೊಂದಿಗೆ ಮೆರವಣಿಗೆ ನಡೆಯಲಿದೆ.

ವಿಶ್ವಕರ್ಮ ಸಂಘದ ಮುಖಂಡರಾದ ಹೆಚ್ ಇ ನಿಂಗಾಚಾರ್, ಹೆಚ್ ಬಿ ವೀರಾಚಾರ್, ಚಂದ್ರಶೇಖರ್, ಉಮೇಶ್, ರಾಜು, ಪ್ರಕಾಶ್,ರವಿ ಜಿ, ಮನೋಹನ್, ಸತೀಶ್ ಸೇರಿದಂತೆ ವಿಶ್ವಕರ್ಮ ಸಮಾಜದ ಬಂಧು ಭಗನಿಯರು ವಿಶ್ವಕರ್ಮ ಜಯಂತ್ಯೋತ್ಸವದಲ್ಲಿ ಪಾಲ್ಗೊಳ್ಳ ಬೇಕು ಎಂದು ವಿಶ್ವಕರ್ಮ ಕ್ಷೇಮಾಭಿವೃದ್ಧಿ ಸಂಘದ ಮಹಿಳಾ ಅಧ್ಯಕ್ಷೆ ಶ್ರೀಮತಿ ಕವಿತಾ ಸ್ವಾಮಿ ಆಚಾರ್ಯ ಪತ್ರಿಕಾ ಪ್ರಕಟಣೆಗೆ ತಿಳಿಸಿದ್ದಾರೆ.

# ಉಚಿತ ಕೋಳಿ, ಹೈನುಗಾರಿಕೆ & ಹಂದಿ ಸಾಕಾಣಿಕೆ ತರಬೇತಿ

ಕೋಲಾರ, : ನಗರ ಹೊರವಲಯದ ಹೊನ್ನೇನಹಳ್ಳಿಯ ಕೆನರಾ ಬ್ಯಾಂಕ್ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯಲ್ಲಿ ನಿರುದ್ಯೋಗಿ ಯುವಕ, ಯುವತಿಯರಿಗಾಗಿ ಉಚಿತವಾಗಿ ಕೋಳಿ ಸಾಕಾಣಿಕೆ, ಹೈನುಗಾರಿಕೆ, ಎರೆಹುಳು ಗೊಬ್ಬರ ತಯಾರಿಕೆ ಮತ್ತು ಹಂದಿ ಸಾಕಾಣಿಕೆ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ.

ಆಸಕ್ತ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು (ಗ್ರಾ) ಜಿಲ್ಲೆಯ 18 ರಿಂದ 50 ವರ್ಷ ವಯೋಮಿತಿಯುಳ್ಳವರು ತಮ್ಮ ರೇಷನ್ ಕಾರ್ಡ್, ಆಧಾರ್ ಕಾರ್ಡ್, 3 ಪಾಸ್ ಪೋರ್ಟ್ ಅಳತೆಯ ಭಾವಚಿತ್ರ ಹಾಗೂ ಬ್ಯಾಂಕ್ ಪಾಸ್ ಬುಕ್ ಜೆರಾಕ್ಸ್ ಪ್ರತಿಯೊಂದಿಗೆ ಅ.12, ಸೋಮವಾರ, ಬೆ.9.30ಕ್ಕೆ ತರಬೇತಿ ಸಂಸ್ಥೆಯಲ್ಲಿ ಪ್ರಾರಂಭವಾಗುವ ತರಬೇತಿಯಲ್ಲಿ ನೇರವಾಗಿ ಭಾಗವಹಿಸಬಹುದು.

ತರಬೇತಿಯು 13 ದಿನಗಳ ಕಾಲಾವಧಿಯದಾಗಿದ್ದು, ತರಬೇತಿ ಅವಧಿಯಲ್ಲಿ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ಕೊಡಿಸಲಾಗುತ್ತದೆ. ಅಭ್ಯರ್ಥಿಗಳಿಗೆ ತರಬೇತಿ ವೇಳೆ ಉಚಿತವಾಗಿ ಊಟ ಹಾಗೂ ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ. ತರಬೇತಿ ನಂತರ ಕೇಂದ್ರ ಸರ್ಕಾರದ ಪ್ರಮಾಣ ಪತ್ರ ವಿತರಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ತರಬೇತುದಾರರ ಮೊ.8971308776, 7760313833 ಸಂಪರ್ಕಿಸಬಹುದಾಗಿದೆ.

# ಕೆ ಆರ್ ಪುರದಲ್ಲಿ ಬಿಜೆಪಿ?ಜೆಡಿಎಸ್ ಮೈತ್ರಿ ಸಭೆ: ಎನ್‌ಡಿಎ ಅಭ್ಯರ್ಥಿ ಎ.ಪಿ. ರಂಗನಾಥ್ ಪರ ಬೆಂಬಲಕ್ಕೆ ಮನವಿ



ಕೆ.ಆರ್.ಪುರ: ಶಿಕ್ಷಕರ ಕ್ಷೇತ್ರದ ಚುನಾವಣೆಯ ಹಿನ್ನೆಲೆಯಲ್ಲಿ ಎನ್‌ಡಿಎ ಅಭ್ಯರ್ಥಿ ಎ.ಪಿ. ರಂಗನಾಥ್ ಅವರ ಪರವಾಗಿ ಶಿಕ್ಷಕರ ಬೆಂಬಲ ಕೋರಿ ಕೆಆರ್ ಪುರ ವಿಧಾನಸಭಾ ಕ್ಷೇತ್ರದ ರಾಮಮೂರ್ತಿ ನಗರದ ಲೋಟಸ್ ಪ್ಯಾಲೇಸ್‌ನಲ್ಲಿ ಬಿಜೆಪಿ?ಜೆಡಿಎಸ್ ಮೈತ್ರಿಕೂಟದ ವತಿಯಿಂದ ಮಹತ್ವದ ಶಿಕ್ಷಕರ ಸಭೆ ನಡೆಯಿತು.

ಈ ಭಾಗದ ಶಾಸಕರಾದ ಬೈರತಿ ಬಸವರಾಜ್ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಮುಖಂಡರು, ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಭಾಗವಹಿಸಿದರು. ಸಭೆಯಲ್ಲಿ ಶಿಕ್ಷಕರ ಕ್ಷೇತ್ರದ ಚುನಾವಣೆಯ ಕುರಿತು ಚರ್ಚಿಸಿ, ಎನ್‌ಡಿಎ ಅಭ್ಯರ್ಥಿ ಎ.ಪಿ. ರಂಗನಾಥ್ ಅವರ ಪರವಾಗಿ ಬೆಂಬಲ ನೀಡುವಂತೆ ಹಾಗೂ ಅವರ ಗೆಲುವಿಗೆ ಶ್ರಮಿಸುವಂತೆ ಶಿಕ್ಷಕರಲ್ಲಿ ಮನವಿ ಮಾಡಲಾಯಿತು.

ಬಿಜೆಪಿ-ಜೆಡಿಎಸ್ ಮೈತ್ರಿಕೂಟದ ಮುಖಂಡರು ಹಾಗೂ ಕಾರ್ಯಕರ್ತರು ಒಗ್ಗಟ್ಟಿನಿಂದ ಚುನಾವಣಾ ಕಾರ್ಯದಲ್ಲಿ ತೊಡಗಿಸಿಕೊಂಡು ಎನ್‌ಡಿಎ ಅಭ್ಯರ್ಥಿಯ ಪರವಾಗಿ ಪ್ರಚಾರ ನಡೆಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಯಲ್ಲಿ ಕೆ ಆರ್ ಪುರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಲಕ್ಷ್ಮಣ್ ಎಲ್, ಬಿಜೆಪಿ ಮಂಡಲ ಅಧ್ಯಕ್ಷ ಮುನೇಗೌಡ, ಮಾಜಿ ಪಾಲಿಕೆ ಸದಸ್ಯ ಶ್ರೀಕಾಂತ್ ಗೌಡ, ಸಚ್ಚಿದಾನಂದ ಮೂರ್ತಿ ಸೇರಿದಂತೆ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಹಲವು ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಅ.12ರಂದು ಕೋಲಾರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಘಟಕ ಉದ್ಘಾಟನೆ

ಕೋಲಾರ,ಅ.10: ಕೋಲಾರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಉದ್ಘಾಟನಾ ಸಮಾರಂಭ ನಗರದ ಅಂತರಗಂಗೆ ರಸ್ತೆಯಲ್ಲಿರುವ ಪತ್ರಕರ್ತರ ಭವನದಲ್ಲಿ ಅಕ್ಟೋಬರ್ 12 ಸೋಮವಾರ ಬೆಳಿಗ್ಗೆ 11-00 ಗಂಟೆಗೆ ನಡೆಯಲಿದೆ. ನಾಗಲಾಪುರ ವೀರ ಸಿಂಹಾಸನ ಸಂಸ್ಥಾನ ಮಠದ ಶ್ರೀ ತೇಜಶಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಮತ್ತು ಬೆಳ್ಳಾವಿ ಮಠದ ಶ್ರೀ ಮಹಾಂತ ಶಿವಾಚಾರ್ಯ ಮಹಾಸ್ವಾಮಿಗಳು ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಲಿದ್ದು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ನ ಅಧ್ಯಕ್ಷ ಡಾ. ಸಿ ಸೋಮಶೇಖರ್ ಐಎಎಸ್ ನಿವೃತ್ತ ರವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಗೌರವಾಧ್ಯಕ್ಷ ಬಿ.ಎಂ ಚೆನ್ನಪ್ಪ ಅಧ್ಯಕ್ಷತೆ ವಹಿಸಲಿದ್ದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ನ ಪ್ರಧಾನ ಕಾರ್ಯದರ್ಶಿ ಸೋಮಶೇಖರ್ ಶ್ರೀ ಗಾಂಜಿ, ಕೋಲಾರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಕೆ ಚಂದ್ರಶೇಖರ್, ಸಮಾಜಸೇವಕ ಮತ್ತು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಹಿರಿಯ ಉಪಾಧ್ಯಕ್ಷ ಸಿಎಂಆರ್ ಶ್ರೀನಾಥ್, ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

# ರೈತರ ಮನೆಮಕ್ಕಳಾದ ಕೃಷಿ ವಿದ್ಯಾರ್ಥಿಗಳು

## ಚಿಲಂನಹಳ್ಳಿಯಲ್ಲಿ ಗ್ರಾಮೀಣ ಕೃಷಿ ಕಾರ್ಯಾನುಭಾವ ತರಬೇತಿ



**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಗೌರಿಬಿದನೂರು:** ತಾಲ್ಲೂಕಿನ ಡಿ.ಪಾಳ್ಯ ಹೋಬಳಿಯ ಚಿಲಂನಹಳ್ಳಿ ಗ್ರಾಮದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಂದ ಗ್ರಾಮೀಣ ಕೃಷಿ ಕಾರ್ಯಾನುಭವ ತರಬೇತಿಯ ಅಂಗವಾಗಿ ರೈತರಿಗೆ ಅರಿವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನುದ್ದೇಶಿಸಿ ಕೃಷಿ ವಿಶ್ವವಿದ್ಯಾಲಯದ ಡೀನ್ ಡಾ.ವೈಎನ್ ಶಿವಲಿಂಗಯ್ಯ ಮಾತನಾಡಿ ಕೃಷಿ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಜೊತೆ ಜೊತೆಗೆ ಗ್ರಾಮೀಣ ಭಾಗದ ಕೃಷಿಯ ಕಾರ್ಯಚಟುವಟಿಕೆಗಳನ್ನು ಪರಿಚಯ ಮಾಡುವ ಹಾಗೂ ಅದರ ಅನುಭವದ ಸಲುವಾಗಿ ಪ್ರತಿವರ್ಷದಂತೆ ಈ ವರ್ಷವು ಸಹ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಈ ತರಬೇತಿಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಮೂರು ತಿಂಗಳುಗಳ ಕಾಲ ಹಳ್ಳಿಗಳಲ್ಲಿ ವಾಸವಿದ್ದು ದಿನನಿತ್ಯದ ಕೃಷಿ ಚಟುವಟಿಕೆಗಳಲ್ಲಿ ರೈತರ ಜೊತೆಗೆ ಒಗ್ಗೂಡಿ ಅನುಭವ ಪಡೆಯುವುದರ ಜೊತೆ ಜೊತೆಗೆ ವಿದ್ಯಾರ್ಥಿಗಳು ಪಡೆದ ಅನುಭವ ಹಾಗೂ ಕಾಲೇಜಿನಲ್ಲಿ ಕಲಿತ ಕೃಷಿಗೆ ಸಂಬಂದಿಸಿದ ವಿಷಯ, ವಿಚಾರಗಳನ್ನು ರೈತರಿಗೆ ಅರಿವು ಮೂಡಿಸಿ, ಕೃಷಿಯಲ್ಲಿ ರೈತರು ಅಳವಡಿಸಿಕೊಂಡು ಉತ್ತಮ ರೀತಿಯ ಕೃಷಿಗೆ ಸಹಕಾರಿಯಾಗಿದೆ ಎಂದರು.

ನಮ್ಮ ಕಾಲೇಜಿನ ವಿದ್ಯಾರ್ಥಿಗಳು ವಾಸ್ತವ ಹೂಡಿರುವ ಹಳ್ಳಿಗಳಲ್ಲಿನ ರೈತರ ಜೊತೆಗೆ ಮನೆ ಮಕ್ಕಳಂತೆ ಇದ್ದು ಉತ್ತಮ ಬಾಂದವ್ಯ ವೃದ್ದಿಸಿಕೊಂಡಿರುವುದು ಖುದ್ದು ರೈತರೇ ಹೇಳುತ್ತಿರುವುದು ಖುಷಿಯ ವಿಚಾರ ಎಂದರು.

ನಮ್ಮ ವಿದ್ಯಾರ್ಥಿಗಳ ಗ್ರಾಮೀಣ ಕೃಷಿ ಕಾರ್ಯಾನುಭವಕ್ಕೆ ಸಹಕರಿಸಿ ಪ್ರೋತ್ಸಾಹ ನೀಡಿದ ಸ್ಥಳೀಯ ರೈತ ಬಂಧುಗಳಿಗೆ, ಸಂಬಂದಪಟ್ಟ ಅಧಿಕಾರಿ ವರ್ಗಕ್ಕೆ ಹಾಗೂ ಜನಪ್ರತಿನಿಧಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆಂದರು.

ಇದೆ ವೇಳೆ ತಾಲ್ಲೂಕು ಪಂಚಾಯತಿಯ ಆಡಳಿತ ವ್ಯವಸ್ಥಾಪಕ ಬಾಲಕೃಷ್ಣ ಮಾತನಾಡಿ ಗ್ರಾಮೀಣ ಕಾರ್ಯಾನುಭವ ತರಬೇತಿಗೆ ಬಂದಿರುವ ವಿದ್ಯಾರ್ಥಿಗಳಿಗೆ ತಮ್ಮ ತರಬೇತಿಯ ಜೊತೆಗೆ ಮಾನವೀಯ ಮೌಲ್ಯಗಳನ್ನು ಕಲಿಯುತ್ತಾರೆ.

ಇದು ಹಳ್ಳಿಗಾಡಿನಲ್ಲಿ ಮಾತ್ರ ಸಾಧ್ಯ ಎಂದ ಅವರು ರೈತ ದೇಶದ ಬೆನ್ನೆಲುಬಾಗಿದ್ದು ರೈತ ಬೆಳೆದ ಬೆಳೆಗಳಿಂದ ಎಲ್ಲರ ಹಸಿವು ನೀಗುತ್ತದೆ ಎಂದು ನುಡಿದರು.

ಗ್ರಾಮೀಣ ಕೃಷಿ ಕಾರ್ಯನುಭವ ಪಡೆಯಲು ಬಂದಿರುವ ಎಲ್ಲಾ ವಿದ್ಯಾರ್ಥಿಗಳು ರೈತರಿಗೆ ಸರ್ಕಾರದ ಯೋಜನೆಗಳನ್ನು ತಿಳಿಸಿಕೊಡುವ ಕಾರ್ಯದ ಜೊತೆ ಜೊತೆಗೆ ತಾವು ವಿದ್ಯಾಭ್ಯಾಸ ಮಾಡುವ ವಿಷಯಗಳ ಬಗ್ಗೆ ರೈತರಿಗೆ ಮಾಹಿತಿ ನೀಡಬೇಕು ಎಂದರು.

ತಾಲ್ಲೂಕು ಪಂಚಾಯತಿ ವತಿಯಿಂದ ವಿಬಿ ಜೀ ರಾಮ್ ಜೀ ಯೋಜನೆಯಡಿಯಲ್ಲಿ ಕೃಷಿಗೆ ಬೇಕಾದ ಎಲ್ಲ ಸೌಕರ್ಯಗಳನ್ನು ರೈತರಿಗೆ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಹಲವು ಯೋಜನೆಗಳು ಇದ್ದು ರೈತರು ಅದರ ಸದುಪಯೋಗ ಪಡಿಸಿಕೊಳ್ಳಬೇಕೆಂದರು.

ಕಾರ್ಯಕ್ರಮದಲ್ಲಿ ಕೃಷಿ ವಿಶ್ವ ವಿದ್ಯಾಲಯದ ಅಧಿಕಾರಿಗಳು, ರೈತ ಸಂಘದ ಅಧ್ಯಕ್ಷ ಲೋಕೇಶ್ ಗೌಡ. ಗ್ರಾಪಂ ಮಾಜಿ ಅಧ್ಯಕ್ಷ ಶ್ರೀನಿವಾಸ್ ರೆಡ್ಡಿ, ಕೃಷಿ ಇಲಾಖೆ ವೀರಕುಮಾರ್, ವಿಜಯಕುಮಾರ್, ವಿದ್ಯಾರ್ಥಿಗಳು ಹಾಗೂ ಊರಿನ ಗ್ರಾಮಸ್ಥರು ಹಾಜರಿದ್ದರು.

# ಸ್ವತಂತ್ರ ಅಭ್ಯರ್ಥಿಯಾಗಿ ಬರೀದ್ ಕಣಕ್ಕೆ

## ಹಣಬಲದ ರಾಜಕಾರಣದ ವಿರುದ್ಧ ವಕೀಲ ಬರೀದ್ ಸಮರ



**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಂತಾಮಣಿ:** ಬಂಡವಾಳಶಾಹಿ ರಾಜಕಾರಣಕ್ಕೆ ಬ್ರೇಕ್ ಹಾಕಲು ಆಗ್ನೇಯ ಪದವೀಧರ ಕ್ಷೇತ್ರದಲ್ಲಿ ಸ್ಪರ್ಧೆ ಮಾಡುತ್ತಿರುವುದಾಗಿ ವಕೀಲ ಬರೀದ್ ತಿಳಿಸಿದರು. ಚಿಂತಾಮಣಿ ನಗರದ ಗಜಾನನ ವೃತ್ತದ ಬಳಿ ಇರುವ ಕಚೇರಿಯಲ್ಲಿ ಕರೆದಿದ್ದ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿ ತಮ್ಮ ಸ್ಪರ್ಧೆಯ ಕುರಿತು ಪ್ರಮುಖ ವಿಷಯಗಳನ್ನು ಹಂಚಿಕೊಂಡರು.

ಚುನಾವಣೆಯಲ್ಲಿ ಬಂಡವಾಳಶಾಹಿಗಳು ಹಣ ಹೂಡಿಕೆ ಮಾಡಿ ಗೆದ್ದು, ನಂತರ ಪದವೀಧರರ ಸಮಸ್ಯೆಗಳಿಗೆ ಸ್ಪಂದಿಸುವುದಿಲ್ಲ. ತಾವು ಕಳೆದ 10 ವರ್ಷಗಳಿಂದ ವಕೀಲ ವೃತ್ತಿಯಲ್ಲಿ ನಿರತರಾಗಿದ್ದು, ಯಾವುದೇ ಬಂಡವಾಳ ಹೂಡಿ ಲಾಭ ಮಾಡಿಕೊಳ್ಳುವ ಉದ್ದೇಶದಿಂದ ಬಂದಿಲ್ಲ. ಬದಲಿಗೆ ಪದವೀಧರರ ನಿಜವಾದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಏಕೈಕ ಉದ್ದೇಶದಿಂದ ಸ್ಪರ್ಧಿಸುತ್ತಿದ್ದೇನೆ ಎಂದು ವಕೀಲ ಬರೀದ್ ಸ್ಪಷ್ಟಪಡಿಸಿದರು.

ಸಂವಿಧಾನದಲ್ಲಿ ಪದವೀಧರರು ಹಾಗೂ ಶಿಕ್ಷಕರ ಧ್ವನಿಯನ್ನು ಮೇಲ್ಮನೆಯಲ್ಲಿ ಪ್ರಸ್ತಾಪಿಸಲು ಹಾಗೂ ಅವರ ಸಮಸ್ಯೆಗಳನ್ನು ಬಗೆಹರಿಸಲು ಈ ಕ್ಷೇತ್ರಗಳನ್ನು ರಚಿಸಲಾಗಿದೆ. ಯಾವುದೇ ರಾಜಕೀಯ ಪಕ್ಷದ ಚಿಹ್ನೆ ಇಲ್ಲದೆ ನಡೆಯುವ ಚುನಾವಣೆಯಲ್ಲಿ ಪ್ರಾಶಸ್ತ್ಯದ ಮತಗಳ ಆಧಾರದ ಮೇಲೆ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗುತ್ತದೆ. ಬುದ್ಧಿವಂತ ಮತದಾರರು ಯೋಗ್ಯ ಅಭ್ಯರ್ಥಿಯನ್ನು ಆಯ್ಕೆ ಮಾಡಬೇಕು ಎಂದು ಮನವಿ ಮಾಡಿದ್ದಾರೆ.

ಹಿಂದಿನ ಚುನಾವಣೆಯಲ್ಲಿ ಜಯಗಳಿಸಿದ್ದ ಜನಪ್ರತಿನಿಧಿಗಳಾದ ಚಿದಾನಂದ ಗೌಡ ಹಾಗೂ ಡಿ.ಟಿ. ಶ್ರೀನಿವಾಸ್ ಮುಂತಾದವರು ಗೆದ್ದ ನಂತರ ಪದವೀಧರರ ಹಾಗೂ ಶಿಕ್ಷಕರ ಸಮಸ್ಯೆಗಳನ್ನು ಆಲಿಸಲು ಅಥವಾ ಈ ಭಾಗಕ್ಕೆ ಬರಲು ನಿರ್ಲಕ್ಷ್ಯ ವಹಿಸಿದ್ದರು ಎಂದು ಆರೋಪಿಸಿದರು.

ಈ ಕ್ಷೇತ್ರದಲ್ಲಿ ಸೇವೆ ಮಾಡುವ ಒಳ್ಳೆಯ ಉದ್ದೇಶದಿಂದ ಮುಂದೆ ಬಂದಿದ್ದೇನೆ. ಐದು ಜಿಲ್ಲೆಗಳ ವ್ಯಾಪ್ತಿಯ ಪದವೀಧರ ಮತದಾರರು ನನ್ನ ಉದ್ದೇಶವನ್ನು ಪರಿಗಣಿಸಿ ಮತ ನೀಡಬೇಕು. ನನ್ನನ್ನು ಆಯ್ಕೆ ಮಾಡಿ ಕಳುಹಿಸಿದರೆ ನಾನು ನಿಮ್ಮ ನಿಜವಾದ ಧ್ವನಿಯಾಗಿ ಕೆಲಸ ಮಾಡುತ್ತೇನೆ ಎಂದು ಬರೀದ್ ಭರವಸೆ ನೀಡಿದರು.

ಪಕ್ಷಗಳ ಹೊಂದಾಣಿಕೆಯ ರಾಜಕಾರಣವನ್ನು ಖಂಡಿಸಿದ ಅವರು, ಕೆಪಿಎಸ್ಸಿ ಹಗರಣಗಳಂತಹ ಪ್ರಮುಖ ವಿಚಾರಗಳಲ್ಲಿ ಪ್ರಮುಖ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪರಸ್ಪರ ಹೊಂದಾಣಿಕೆ ಮಾಡಿಕೊಂಡು ಜನರ ಸಮಸ್ಯೆಗಳನ್ನು ನಿರ್ಲಕ್ಷಿಸಿವೆ ಎಂದು ಆರೋಪಿಸಿದರು.

ಮೇಲ್ಮನೆಗೆ ಯಾವುದೇ ಸರ್ಕಾರವನ್ನು ರಚಿಸುವ ಅಥವಾ ಕೆಡವಿಸುವ ಶಕ್ತಿ ಇಲ್ಲದಿದ್ದರೂ, ಜನಸಾಮಾನ್ಯರ ಹಾಗೂ ಪದವೀಧರರ ಸಮಸ್ಯೆಗಳಿಗೆ ಧ್ವನಿಯಾಗಲು ಒಬ್ಬ ಸ್ವತಂತ್ರ ಮನೋಭಾವದ ಪ್ರತಿನಿಧಿಯ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಪದವೀಧರರ ಕುಂದುಕೊರತೆಗಳನ್ನು ಆಲಿಸಲು ಸೂಕ್ತ ವೇದಿಕೆ ಅಥವಾ ಡಿಜಿಟಲ್ ಸಂಪರ್ಕ ವ್ಯವಸ್ಥೆ ಇಲ್ಲದಿರುವುದನ್ನು ಅವರು ಬೆಟ್ಟು ಮಾಡಿದರು.

ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ಕೆಲವೇ ತಿಂಗಳ ಸಂಬಳ ನೀಡುವುದು, ಪಿಎಫ್ ಹಾಗೂ ಇಎಸ್‌ಐ ಸೌಲಭ್ಯಗಳನ್ನು ನೀಡದಿರುವಂತಹ ಗಂಭೀರ ಸಮಸ್ಯೆಗಳನ್ನು ಎತ್ತಿ ತೋರಿಸಿದ ಅವರು, ಹಿಂದಿನ ಪ್ರತಿನಿಧಿಗಳು ಈ ಬಗ್ಗೆ ಧ್ವನಿ ಎತ್ತಲು ವಿಫಲರಾಗಿದ್ದಾರೆ ಎಂದು ಟೀಕಿಸಿದರು.

ರಾಜಕೀಯಕ್ಕೆ ಸ್ವಂತ ಲಾಭಕ್ಕಾಗಿ ಬಂದಿಲ್ಲವೆಂದು ಸ್ಪಷ್ಟಪಡಿಸಿದ ಬರೀದ್, ತಾವು ಸಲ್ಲಿಸಿರುವ ಅಫಿಡವಿಟ್‌ನಲ್ಲಿ ಆಸ್ತಿ ವಿವರಗಳನ್ನು ಪಾರದರ್ಶಕವಾಗಿ ನೀಡಿದ್ದು, ಅಧಿಕಾರಕ್ಕೆ ಬಂದ ಮೇಲೆಯೂ ಅಷ್ಟೇ ಪ್ರಾಮಾಣಿಕತೆಯಿಂದ ಇರುವುದಾಗಿ ತಿಳಿಸಿದರು.

ಕರ್ನಾಟಕ ಆಗ್ನೇಯ ಪದವೀಧರ ಕ್ಷೇತ್ರದ ಚುನಾವಣೆಗೆ ಸ್ವತಂತ್ರ ಅಭ್ಯರ್ಥಿಯಾಗಿ ತಾವು ನಾಮಪತ್ರ ಸಲ್ಲಿಸಿದ್ದು ಅಂಗೀಕಾರವಾಗಿದೆ. ವಾಪಸ್ ಪಡೆಯುವ ಸಮಯ ಮುಗಿದಿದ್ದು, ತಮಗೆ ಎಷ್ಟೇ ಒತ್ತಡಗಳಿದ್ದರೂ ಸ್ಪರ್ಧೆಯಲ್ಲಿ ಮುಂದುವರಿಯುವುದಾಗಿ ಹಾಗೂ ಯಾವುದೇ ಕಾರಣಕ್ಕೂ ಹಿಂದೆ ಸರಿಯುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಈ ಸಂದರ್ಭದಲ್ಲಿ ಉಪನ್ಯಾಸಕರಾದ ನಿಜಾಮ್, ನಂದಿನಿ, ವಕೀಲರಾದ ಆದರ್ಶ್, ನವೀನ್ ಉಪಸ್ಥಿತರಿದ್ದರು.

# ಶ್ರೀಬಯಲಾಂಜನೇಯಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ



**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಶಿಡ್ಲಘಟ್ಟ:** ತಾಲೂಕಿನ ಅಪ್ಪೇಗೌಡನಹಳ್ಳಿ ಗೇಟ್ ಬಳಿಯ ಬಯಲಾಂಜನೇಯಸ್ವಾಮಿ ದೇವಾಲಯದ ಆವರಣದಲ್ಲಿ ಮಹಾಲಯ ಅಮಾವಾಸ್ಯೆ ಅಂಗವಾಗಿ ಶನಿವಾರ ಭಜನೆ ಕಾರ್ಯಕ್ರಮ ನಡೆಯಿತು.

ಹಿಂದೂ ಧಾರ್ಮಿಕ ಪರಂಪರೆಯಲ್ಲಿ ಮಹಾಲಯ ಅಮಾವಾಸ್ಯೆಗೆ ವಿಶೇಷ ಮಹತ್ವವಿದೆ. ಪಿತೃಗಳನ್ನು ಸ್ಮರಿಸಿ, ಅವರ ಆತ್ಮಶಾಂತಿಗಾಗಿ ತರ್ಪಣ, ಪೂಜೆ ಹಾಗೂ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸುವುದು ಈ ದಿನದ ಪ್ರಮುಖ ಆಚರಣೆಗಳಾಗಿವೆ.

ಪೂರ್ವಜರ ಸ್ಮರಣೆಯೊಂದಿಗೆ ದೇವರ ಆರಾಧನೆ, ನಾಮಸ್ಮರಣೆ ಮತ್ತು ಭಜನೆಗಳಲ್ಲಿ ಪಾಲ್ಗೊಳ್ಳುವುದರಿಂದ ಮನಸ್ಸಿಗೆ ಶಾಂತಿ ದೊರೆಯುವುದರ ಜತೆಗೆ ಧಾರ್ಮಿಕ ಶ್ರದ್ಧೆ ಮತ್ತು ಆಧ್ಯಾತ್ಮಿಕ ಚಿಂತನೆಗೆ ಪ್ರೇರಣೆ ಸಿಗುತ್ತದೆ ಎಂಬ ನಂಬಿಕೆ ಇದೆ.

ಭಜನೆಯು ಭಕ್ತರನ್ನು ಒಗ್ಗೂಡಿಸುವುದರೊಂದಿಗೆ ಭಕ್ತಿ, ಸಾಮರಸ್ಯ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.

ಈ ಹಿನ್ನೆಲೆಯಲ್ಲಿ ನಡೆದ ಭಜನಾ ಕಾರ್ಯಕ್ರಮದಲ್ಲಿ ಶ್ರೀ ಶಾರದ ಸಂಗೀತ ಕನ್ನಡ ಕಲಾ ಸಂಘ (ರಿ), ಶಿಡ್ಲಘಟ್ಟ ತಾಲ್ಲೂಕು, ಶ್ರೀರಾಮ ಭಕ್ತ ಮಂಡಳಿ, ಅಪ್ಪೇಗೌಡನಹಳ್ಳಿ, ತಾಲ್ಲೂಕು ಸವಿತಾ ಕಲಾ ಸಂಘ, ಶ್ರೀ ಗಂಗಾಭವಾನಿ ಕಲಾವಿದರು, ಮೇಲೂರು, ಶ್ರೀ ಚನ್ನಕೇಶಸ್ವಾಮಿ ಭಜನಾ ಮಂಡಳಿ, ಇದ್ಲೂಡು, ಶ್ರೀ ಚೌಡೇಶ್ವರಿ ಭಜನಾ ಮಂಡಳಿ, ಕೇಶವಾರ ಹಾಗೂ ಶ್ರೀ ಗಂಗಾದೇವಿ ಭಜನಾ ಮಂಡಳಿ, ಕೊಂಡೇನಹಳ್ಳಿ ಸೇರಿದಂತೆ ವಿವಿಧ ಕಲಾ ಸಂಘಗಳು ಮತ್ತು ಭಜನಾ ಮಂಡಳಿಗಳ ಸದಸ್ಯರು ಭಾಗವಹಿಸಿದ್ದರು.

ವಿವಿಧ ಮಂಡಳಿಗಳ ಕಲಾವಿದರು ಭಕ್ತಿಗೀತೆಗಳು ಹಾಗೂ ಭಜನೆಗಳನ್ನು ಪ್ರಸ್ತುತಪಡಿಸಿದರು.

ದೇವರ ನಾಮಸ್ಮರಣೆಯಿಂದ ದೇವಾಲಯದ ಆವರಣದಲ್ಲಿ ಭಕ್ತಿಮಯ ವಾತಾವರಣ ನಿರ್ಮಾಣವಾಗಿತ್ತು.

ಭಕ್ತರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ದೇವರ ದರ್ಶನ ಪಡೆದು ಪೂಜೆ ಸಲ್ಲಿಸಿದರು.

ಧಾರ್ಮಿಕ ಆಚರಣೆಗಳ ಜತೆಗೆ ಭಜನೆ ಮತ್ತು ಸಂಗೀತದ ಮೂಲಕ ಭಕ್ತಿ ಪರಂಪರೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಪ್ರಯತ್ನವಾಗಿ ಕಾರ್ಯಕ್ರಮ ಗಮನ ಸೆಳೆಯಿತು.

# ಅಭಾಸಾಪ ನೂತನ ತಾಲೂಕು ಅಧ್ಯಕ್ಷರಾಗಿ ಪಿ.ಜಿ.ಶಿವಶಂಕರಾಚಾರಿ ಆಯ್ಕೆ

**ಸ್ಕಂದಗಿರಿ ವಾಣಿ ಸುದ್ದಿಜಾಲ**



**ಭಾಗ್ಯನಗರ:** ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಬಾಗೇಪಲ್ಲಿ ತಾಲ್ಲೂಕಿನ ನೂತನ ಅಧ್ಯಕ್ಷರಾಗಿ ನಿವೃತ್ತ ಶಿಕ್ಷಕ ಹಾಗು ಗಾಯಕ ಪಿ.ಜಿ.ಶಿವಶಂಕರಾಚಾರಿಯವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.

ಈ ಬಗ್ಗೆ ಅಭಾಸಾಪ ಜಿಲ್ಲಾಧ್ಯಕ್ಷ ಕಾಗತಿ ವೆಂಕಟರತ್ನಂ ರವರು ಪತ್ರಿಕಾ ಹೇಳಿಕೆಯನ್ನು ನೀಡಿ ಬಾಗೇಪಲ್ಲಿ ತಾಲ್ಲೂಕಿನ ಅಖಿಲ ಭಾರತೀಯ ಸಾಹಿತ್ಯ ಪರಿಷತ್ತಿಗೆ ಪಿ.ಜಿ.ಶಿವಶಂಕರಾಚಾರಿಯವರನ್ನು ಅಧ್ಯಕ್ಷರನ್ನಾಗಿ, ಜಿ.ಎ.ಸತ್ಯನಾರಾಯಣರಾವ್ ರವರನ್ನು ಕಾರ್ಯದರ್ಶಿಯಾಗಿ, ಕೆ.ಶ್ರೀನಿವಾಸ್ ರವರು ಖಜಾಂಚಿ ಮತ್ತು ವೆಂಕಟೇಶ್ ಮಾಡಪ್ಪಲ್ಲಿ ರವರನ್ನು ಪತ್ರಿಕಾ ಕಾರ್ಯದರ್ಶಿಯನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ನೂತನ ಅಧ್ಯಕ್ಷ ಪಿ.ಜಿ.ಶಿವಶಂಕರಾಚಾರಿ ಮಾತನಾಡಿ, ನನಗೆ ಕೊಟ್ಟಿರುವ ಜವಾಬ್ದಾರಿಯನ್ನು ಅತ್ಯಂತ ಪ್ರಾಮಾಣಿಕವಾಗಿ ನಿರ್ವಹಿಸಿ ಗಡಿ ತಾಲ್ಲೂಕಿನಲ್ಲಿ ಕನ್ನಡ ಸಾಹಿತ್ಯಾತ್ಮಕ ಚಟುವಟಿಕೆಗಳನ್ನು ಹೆಚ್ಚು ಹೆಚ್ಚು ಹಮ್ಮಿಕೊಳ್ಳುವುದರ ಮೂಲಕ ಕನ್ನಡ ಸೇವೆಯನ್ನು ಮಾಡಲಾಗುವುದು ಎಂದರು.

# ಅ.12 ರಿಂದ 14ರ ವರೆಗೆ ಆಯ್ಕೆ ಪುಸ್ತಕಗಳ ಪ್ರದರ್ಶನ

ರಾಮನಗರ: 2023ನೇ ವರ್ಷದಲ್ಲಿ ಪ್ರಕಟಗೊಂಡು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಗ್ರಂಥಾಲಯಗಳಿಗಾಗಿ ಆಯ್ಕೆಗಾಗಿ ಸ್ವೀಕರಿಸಿದ ಪುಸ್ತಕಗಳ ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದೆ.

ಆಯ್ಕೆಯಾದ ಹಾಗೂ ಆಯ್ಕೆಯಾಗದ ಪುಸ್ತಕಗಳ ಪ್ರದರ್ಶನವನ್ನು ಅ.12 ರಿಂದ 14ರ ವರೆಗೆ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5.30ರ ವರೆಗೆ ಬೆಂಗಳೂರಿನ ವಿಜಯನಗರದ ಎಂ.ಸಿ., ಬಡಾವಣೆಯ ಡಾ. ವಿಷ್ಣುವರ್ಧನ ಸ್ಮಾರಕ ಸ್ಪರ್ಧಾತ್ಮಕ ಪರೀಕ್ಷೆಗಳ ಅಧ್ಯಯನ ಕೇಂದ್ರ (ಡಾ. ಬಾಲಗಂಗಾಧರನಾಥ ಸ್ವಾಮೀಜಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಹತ್ತಿರ) ದಲ್ಲಿ ಗ್ರಂಥಾಲಯದ ಸಭಾಂಗಣದ ನೆಲ ಮಹಡಿಯಲ್ಲಿ ಏರ್ಪಡಿಸಲು ಹಾಗೂ ಆಯ್ಕೆಯಾದ ಪುಸ್ತಕಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಜಿಲ್ಲಾ ಕೇಂದ್ರ ಗ್ರಂಥಾಲಯ, ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ, ಕಂದಾಯ ಭವನ, ಮೊದಲನೇ ಮಹಡಿ, ಕೊಠಡಿ ಸಂಖ್ಯೆ-201ರ ಸೂಚನಾ ಫಲಕದಲ್ಲಿ ಮತ್ತು ಇಲಾಖೆಯ ಅಧಿಕೃತ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಗೆ 2023ರಲ್ಲಿ ಆಯ್ಕೆಗೆ ಸಲ್ಲಿಸಿದ ಲೇಖಕರು, ಲೇಖಕ-ಪ್ರಕಾಶಕರು, ಪ್ರಕಾಶಕರು ಮತ್ತು ಪ್ರಕಟಣಾ ಸಂಸ್ಥೆಗಳ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಅ.12 ರಿಂದ 22ರ ಸಂಜೆ 5.30 ರೊಳಗೆ ಆಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ. ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು-01 ಇಲ್ಲಿಗೆ ಲಿಖಿತವಾಗಿ ಮನವಿ ಸಲ್ಲಿಸಬೇಕು ಎಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಕೇಂದ್ರ ಗ್ರಂಥಾಲಯ ಮುಖ್ಯ ಗ್ರಂಥಾಲಯಾಧಿಕಾರಿ ಚನ್ನಕೇಶವ ಎಚ್.ಆರ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಣೆಕಟ್ಟು ನಿರ್ಮಾಣಕ್ಕೆ ಅಡ್ಡಿಪಡಿಸಿದರೆ ಜನತೆ ಶಾಪಕ್ಕೆ ತುತ್ತಾಗುತ್ತೀರಿ:ಮಂಜುನಾಥರೆಡ್ಡಿ

## ಶಾಸಕರ ವಿರುದ್ಧ ಆರೋಪ ಮಾಡಿದ ಹರಿನಾಥರೆಡ್ಡಿಗೆ ಮುಖಂಡರ ತಿರುಗೇಟು

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಭಾಗ್ಯನಗರ:** ಗಂಟ್ಲಮಲ್ಲಮ್ಮ ಕಣಿವೆ ಡ್ಯಾಂ ನಿರ್ಮಾಣಕ್ಕಾಗಿ 22 ಮಂದಿ ರೈತರು ಜಮೀನು ನೀಡಿ ಈ ಭಾಗದ ಅಭಿವೃದ್ಧಿಗೆ ಸಹಕರಿಸಿದ್ದಾರೆ. ರೈತರ ಹಿತದೃಷ್ಟಿಯಿಂದ ಕೈಗೊಂಡಿರುವ ಯೋಜನೆಯನ್ನು ರಾಜಕೀಯಗೊಳಿಸಿ ಅಡ್ಡಿಪಡಿಸಲು ಯತ್ನಿಸಿದರೆ ಜನತೆಯ ಶಾಪಕ್ಕೆ ತುತ್ತಾಗುತ್ತೀರಿ ಎಂದು ಅಖಿಲ ಕರ್ನಾಟಕ ರೈತ ಸಂಘಟನೆ ಜಿಲ್ಲಾ ಸಂಚಾಲಕ ರೈತ ಮುಖಂಡ ಪಿ.ಮಂಜುನಾಥರೆಡ್ಡಿ ಎಚ್ಚರಿಕೆ ನೀಡಿದರು.

ಗಂಟ್ಲಮಲ್ಲಮ್ಮ ಅಣೆಕಟ್ಟು ನಿರ್ಮಾಣ ಸ್ಥಳದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಎನ್.ಡಿ.ಎ ಮುಖಂಡ ಹರಿನಾಥರೆಡ್ಡಿ ಎಂಬುವವರು ಪತ್ರಿಕಾಗೋಷ್ಠಿ ನಡೆಸಿ ತಪ್ಪು ಸಂದೇಶಗಳನ್ನು ಹರಡುತ್ತಿದ್ದಾರೆ. ಬರಪೀಡಿತ ಪ್ರದೇಶದಲ್ಲಿ ನೀರಿನ ಸಮಸ್ಯೆ ನೀಗಿಸುವ ಸಲುವಾಗಿ ಶಾಸಕ ಎಸ್. ಎನ್.ಸುಬ್ಬಾರೆಡ್ಡಿಯವರು ಅವಿರತ ಶ್ರಮವಹಿಸಿ ಸುಮಾರು 200 ಕೋಟಿ ವೆಚ್ಚದಲ್ಲಿ ಐತಿಹಾಸಿಕವಾದ ಗಂಟ್ಲಮಲ್ಲಮ್ಮ ಅಣೆಕಟ್ಟು ಮಂಜೂರು ಮಾಡಿಸಿ ನಿರ್ಮಾಣ ಕಾಮಗಾರಿ ಆರಂಭವಾಗಿದೆ.

ಇದಕ್ಕಾಗಿ ರೈತರು ಜಮೀನನ್ನು ನೀಡಿರುವುದು ಅವರ ತ್ಯಾಗ ಮತ್ತು ಜನಪರ ಕಾಳಜಿಯನ್ನು ತೋರುತ್ತಿದ್ದು ಅವರಿಗೆ ಶತಕೋಟಿ ನಮನಗಳನ್ನು ಸಲ್ಲಿಸುತ್ತೇನೆ. ಇವರ ಹೆದರು ಈ ಭಾಗದಲ್ಲಿ ಚಿರಸ್ಥಾಯಿಯಾಗಿ ಚರಿತ್ರೆಯಲ್ಲಿ ಉಳಿದುಬಿಡುತ್ತದೆ. ಆದರೆ ಹರಿನಾಥರೆಡ್ಡಿ ರಾಜಕೀಯ ಸ್ವಾರ್ಥಕ್ಕಾಗಿ ಅಣೆಕಟ್ಟು ನಿರ್ಮಾಣಕ್ಕೆ ಅಡ್ಡಿಪಡಿಸುವ ರೀತಿಯಲ್ಲಿ ವಿನಾಕಾರಣ ಶಾಸಕರ ಹೆಸರನ್ನು ಬಳಕೆ ಮಾಡಿ

ಬ್ರೋಕರುಗಳು ಮತ್ತು ಪಟ್ಟಭದ್ರ ಹಿತಾಸಕ್ತಿಗಳ ಮಾತು ಕೇಳಿ ಯೋಜನೆಯ ಕುರಿತು ಗೊಂದಲ ಸೃಷ್ಟಿಸಿ, ವಕ್ರೀಕರಣಮಾಡಿ ಸುಳ್ಳು ಸುದ್ದಿಗಳನ್ನು ಹಬ್ಬಿಸುತ್ತಿದ್ದಾರೆ. ಸರ್ಕಾರದ ಮೂಲಕ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ ಪರಿಹಾರ ನೀಡುವವರೆಗೆ ವರ್ಷಗಳೇ ಕಳೆಯುವ ಸಾಧ್ಯತೆಯಿದೆ.

ಉದಾಹರಣೆ ಚಿತ್ರಾವತಿ ಜಲಾಶಯ ಮತ್ತು ಕೈಗಾರಿಕೆಗಳಿಗೆ ಭೂಸ್ವಾಧೀನವಾಗಿರುವ ಹಲವಾರು ರೈತರಿಗೆ 20 ವರ್ಷಗಳಾಗಿದ್ದರೂ ಪರಿಹಾರ ಸಿಕ್ಕಿಲ್ಲ. ಪರಿಹಾರ ಪಡೆಯದೆ ಅನೇಕ ರೈತರು ಸತ್ತುಹೋಗಿದ್ದಾರೆ. ಈ ಹಿನ್ನೆಲೆಯಲ್ಲಿ ರೈತರಿಗೆ ತ್ವರಿತವಾಗಿ ಹಣ ತಲುಪಿಸಲು ಪರ್ಯಾಯ ವ್ಯವಸ್ಥೆ ಮಾಡಿ ಸರ್ಕಾರ ನಿಗದಿಪಡಿಸಿರುವ ಎಸ್‌ಆರ್ ದರಕ್ಕಿಂತ 3-4 ಪಟ್ಟು ಹೆಚ್ಚಿನ ಪರಿಹಾರ ನೀಡಲಾಗಿದೆ.

ಶಾಸಕರ ಹೆಸರಿಗೆ ಮಸಿ ಬಳಿಯುವ ಪ್ರಯತ್ನ ನಡೆಯುತ್ತಿದೆ. ಹರಿನಾಥರೆಡ್ಡಿಯವರಿಗೆ ಜನತೆಯ ಬಗ್ಗೆ ಕಾಳಜಿ ಇದ್ದರೆ ಅಣೆಕಟ್ಟು ನಿರ್ಮಾಣ ವಿಚಾರದಲ್ಲಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಯತ್ನಿಸುತ್ತಿರಲಿಲ್ಲ ಎಂದು ಅವರು ಆರೋಪಿಸಿದರು.

ಎನ್‌ಡಿಎ ಮುಖಂಡರು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿ ಕೃಷ್ಣಾ ನದಿ ನೀರನ್ನು ಈ ಭಾಗಕ್ಕೆ ತರುವ ವಿಚಾರದಲ್ಲಿ ಶ್ರಮಿಸಲಿ, ಪ್ರಯತ್ನಿಸಲಿ ನಾವು ಅದನ್ನು ಸ್ವಾಗತಿಸುತ್ತೇವೆ ಎಂದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬೂರಗಮಡಗು ನರಸಿಂಹಪ್ಪ ಮಾತನಾಡಿ, 15 ವರ್ಷಗಳ ಹಿಂದೆ ಚುನಾವನೆಯಲ್ಲಿ ಸೋತು ಮಾಯವಾಗಿದ್ದ ಹರಿನಾಥರೆಡ್ಡಿ ಚುನಾವಣೆ ಸಮೀಪಿಸಿದಾಗ ಕಾಣಿಸಿಕೊಂಡಿದ್ದಾರೆ. ಸರ್ಕಾರದಿಂದ ಹಣ ಬಿಡುಗಡೆಯಾಗಿ ಡ್ಯಾಂ ನಿರ್ಮಾಣ ಪ್ರಕ್ರಿಯೆ ವಿಳಂಬವಾಗಬಹುದೆಂಬ ಕಾರಣಕ್ಕೆ ಸಂಸ್ಥೆಯೊಂದರ ಮೂಲಕ ರೈತರಿಗೆ ನ್ಯಾಯಯುತವಾದ ಹಣ ಪಾವತಿಸಲಾಗಿದೆ.



ಹರಿನಾಥರೆಡ್ಡಿ ಅವರು ಸುಂಕಲಮ್ಮ ದೇವಸ್ಥಾನದ ಬಳಿ ಸುಮಾರು ಎಂಟೂವರೆ ಎಕರೆ ಖರಾಬು ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ರೈತರಿಂದ 6-7 ಲಕ್ಷಗಳಿಗೆ ಭೂಮಿ ಖರೀದಿಸಿದ್ದು ಈಗ ಅದರ ಬೆಲೆ ಒಂದು ಕೋಟಿಗೂ ಹೆಚ್ಚಾಗಿದೆ.

ಹೆಚ್ಚಿನ ಬೆಲೆಯನ್ನು ರೈತರಿಗೆ ಹಿಂತಿರುಗಿಸಲು ಅವರು ಸಿದ್ದರಾಗಿದ್ದಾರೆಯೇ ಎಂದು ಪ್ರಶ್ನಿಸಿದರು. ಜನರ ಸಮಸ್ಯೆಗಳಿಗೆ ನಿರಂತರವಾಗಿ ಸ್ಪಂದಿಸಬೇಕು. ರಾಜಕೀಯ ಲಾಭಕ್ಕಿಂತ ಅಭಿವೃದ್ಧಿಗೆ ಆದ್ಯತೆ ನೀಡಬೇಕು ಆಗ ಕ್ಷೇತ್ರದ ಜನತೆ ನಿಮ್ಮನ್ನು ಗುರುತಿಸುತ್ತಾರೆ. ಎಂದು ಹೇಳಿದರು.

200 ಕೋಟಿ ವೆಚ್ಚದ ಡ್ಯಾಂ ಮಂಜೂರು ಮಾಡಿಸಲು ಶಾಸಕರು ಮಾಡಿರುವ ನಿರಂತರ ಪ್ರಯತ್ನಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಡ್ಯಾಂ ಕಾಮಗಾರಿ ಮುಗಿದರೆ ಶಾಸಕರ ವರ್ಚಸ್ಸು ಹೆಚ್ಚಾಗಿ ಮತ್ತೆ ಶಾಸಕರಾಗುತ್ತಾರೆ ಎಂಬ ಭಯದಿಂದ ಉತ್ತರಕುಮಾರನಂತೆ ಮಾತನಾಡುವ ಹರಿನಾಥರೆಡ್ಡಿಯವರಿಗೆ ಶಾಸಕರ ಬಗ್ಗೆ ಮಾತನಾಡಲು ಅರ್ಹತೆಯೇ ಇಲ್ಲ ಶಾಸಕ ಸುಬ್ಬಾರೆಡ್ಡಿಯವರು 4ನೇ ಬಾರಿ ಶಾಸಕರಾಗುವುದನ್ನು ಸುಳ್ಳು ಹೇಳಿಕೆಗಳಿಂದ ತಡೆಯಲು ಸಾಧ್ಯವಿಲ್ಲ. ಸುಳ್ಳು ಹೇಳುವುದನ್ನು ಬಿಟ್ಟು ಸತ್ಯ ಮಾತನಾಡಿ ಕ್ಷೇತ್ರದ ಜನತೆ ಪ್ರಜ್ಞಾವಂತರಿದ್ದಾರೆ ಎಂದು ತಿಳಿಯಿರಿ ಎಂದರು.

ಜಿಪಂ ಮಾಜಿ ಉಪಾಧ್ಯಕ್ಷ ಎ.ವಿ. ಪೂಜಪ್ಪ, ಮುಖಂಡರಾದ ಗೋಪಾಲರೆಡ್ಡಿ, ವೆಂಕಟಸುಬ್ಬಾರೆಡ್ಡಿ, ರಾಮರೆಡ್ಡಿ, ಚಂದ್ರ, ಶ್ರೀನಿವಾಸ, ನಾರಾಯಣಪ್ಪ, ಶ್ರೀರಾಮ, ಬೈರೆಡ್ಡಿ ಮತ್ತಿತರರು ಉಪಸ್ಥಿತರಿದ್ದರು.

Printed by PRABHAKR G., Printed at M/s. SAI PRINTS, # 8, Subramanya Lane, Cottonpet, Bengaluru, Karnataka - 560053
Published by Smt. LAKSHMINARASAMMA, Owned by Smt. LAKSHMINARASAMMA,
Published at : Varalakonda Village, Somenahalli Hobli, Gudibande Taluk, Chikkaballapur Dist-562104, Karnataka. Editor SHIVAKUMAR K. Mobile: 8147582389 / 9743641515